

# ಸಿಹಿ ಕಹಿ

SK NEWS ಕನ್ನಡ


ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 231 Friday 23-05-2025 E-mail : maruti.b.hosamani76@gmail.com Page: 4 Price : Rs. 1/-

## ಕೆ.ನೇಮಿರಾಜ ನಾಯ್ಕ್ ಶಾಸಕರಿಂದ ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಣೆ




**ಸಿಹಿ ಕಹಿ ಸುದ್ದಿ,**
**ಕೊಟ್ಟೂರು :** ಪಶು ಪಾಲನೆ ಮತ್ತು ಪಶು ವೈದ್ಯ ಸೇವಾ ಇಲಾಖೆ ಕೊಟ್ಟೂರು ವತಿಯಿಂದ ದಿನಾಂಕ 21.05.2025ರಂದುವಲಸೆ/ಸಂಚಾರಿಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಣಾ ಕಾರ್ಯಕ್ರಮದಲ್ಲಿ ಕೆ.ನೇಮಿರಾಜನಾಯ್ಕ್‌ಶಾಸಕರುಹಗರಿಬೊಮ್ಮನಹಳ್ಳಿ ವಿಧಾನ ಸಭಾ ಕ್ಷೇತ್ರ ಗುರುತಿನ ಚೀಟಿ ಕುರಿಗಾಹಿಗಳಿಗೆ ನೀಡಲಾಯಿತು. ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ವಿಜಯನಗರ ಜಿಲ್ಲೆಯ ಎಲ್ಲಾ ತಾಲೂಕಿನ ಕುರಿಗಾಹಿಗಳಿಗೆ ಗುರುತಿನ ಚೀಟಿ ವಿತರಣೆ ಮಾಡುವುದರ ಮೂಲಕ ಇವರಿಗೆ ಬರುವ ಸೌಲಭ್ಯಗಳನ್ನು ನಿಗಮದ ಮೂಲಕ ಉಚಿತವಾಗಿ ಔಷಧಿ ವೈದ್ಯ ತಪಾಸಣೆ ಹಾಗೂ ಕುರಿಗಾಹಿಗಳಿಗೆ ಬೇಕಾಗಿರುವ ಸೌಲಭ್ಯಗಳನ್ನು ವಲಸೆ ಮತ್ತು ಸಂಚಾರಿ ಕುರಿಗಾಹಿಗಳಿಗೆ ಒದಗಿಸಲು ಅನುಕೂಲವಾಗುತ್ತದೆ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಉಜ್ಜಿನಿ ರುದ್ರಪ್ಪ ಅಧ್ಯಕ್ಷರು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಕೊಟ್ಟೂರು, ತೋಟದ ರಾಮಣ್ಣ ಉಪಾಧ್ಯಕ್ಷರು ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘ ಕೊಟ್ಟೂರು, ವೀಣಾ ವಿವೇಕಾನಂದ ಗೌಡ ಸದಸ್ಯರು ಪಟ್ಟಣ ಪಂಚಾಯಿತಿ ಕೊಟ್ಟೂರು, ಡಾ. ಚಂದ್ರ ನಾಯ್ಕ ಎಂ ಮುಖ್ಯ ಪಶು ವೈದ್ಯಾಧಿಕಾರಿಗಳು,ಡಾ. ಕೊಟ್ರೇಶ್ ವಿ ಕೆ ಪಶುವೈದ್ಯಾಧಿಕಾರಿಗಳು,ಡಿಯೋಗೇಶ್ವರಹಿ.ಪ.ವೈ.ಪ, ಮಲ್ಲಿಕಾರ್ಜುನ ಮತ್ತು ಎಂ ಎಸ್ ಶಾಂತಕುಮಾರಿ ಕಿ. ಪ. ವೈ. ಪ, ಮೂಗಣ್ಣ ಹೊಸಕೋಡಹಳ್ಳಿ, ಪರಸಪ್ಪ, ಹಾಗೂ ಅನೇಕ ಕುರಿಗಾಹಿಗಳು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪ್ರದೀಪ್. ಕುಮಾರ್.ಎಸ್.ಕೊಟ್ಟೂರು**

## ಭಯೋತ್ಪಾದನೆ ನಿರ್ಮೂಲನೆಗೆ ಸಂಕಲ್ಪ ಮಾಡಿ: ಸಂತೋಷ ಬಂಡೆ

**ಸಿಹಿ ಕಹಿ ಸುದ್ದಿ,**
**ವಿಜಯಪುರ :** ಭಯೋತ್ಪಾದನೆ ಎಂಬ ಜಾಗತಿಕ ಪಿಡುಗನ್ನು ಸಾಮೂಹಿಕವಾಗಿ ಎದುರಿಸಲು ನಾಗರಿಕರಲ್ಲಿ ಏಕತೆ, ಶಾಂತಿ ಮತ್ತು ದೇಶ ಪ್ರೇಮದ ಪ್ರಜ್ಞೆಯನ್ನು ಬೆಳೆಸುವುದು ಇಂದಿನ ಅಗತ್ಯವಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.
ಬುಧವಾರ ದಂದು ತಾಲೂಕಿನ ನಾಗಠಾಣ ಗ್ರಾಮದ ಅರಿವು ಕೇಂದ್ರದಲ್ಲಿ ಹಮ್ಮಿಕೊಂಡ 'ರಾಷ್ಟ್ರೀಯ ಭಯೋತ್ಪಾದನೆ ವಿರೋಧಿ ದಿನ'ದ ಕಾರ್ಯಕ್ರಮದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಿ ಅವರು ಮಾತನಾಡಿದರು.
ಇಂದಿನ ಯುವ ಪೀಳಿಗೆಗೆ ದೇಶದ ಸಂಸ್ಕೃತಿ, ಸಂಸ್ಕಾರ, ಶಾಂತಿಯ ಮೌಲ್ಯವನ್ನು ಕಲಿಸಬೇಕು. ನಾವು ಭಾರತವನ್ನು ಭರವಸೆ, ಶಕ್ತಿ ಮತ್ತು ಒಗ್ಗಟ್ಟಿನ ಸಂಕೇತವನ್ನಾಗಿಸಿ, ಶಾಂತಿ, ಸಹಬಾಳ್ವೆಯ ತೋಟವನ್ನಾಗಿ ಮಾಡಿ, ಭಯೋತ್ಪಾದನೆಯ ಸಂಪೂರ್ಣ ನಿರ್ಮೂಲನೆಗೆ ಸಂಕಲ್ಪ ಮಾಡಬೇಕಿದೆ ಎಂದು ಹೇಳಿದರು. ವಿಶ್ವನಾಥ ಕಲಗೊಂಡ ಮಾತನಾಡಿ, ಭಯೋತ್ಪಾದನೆಯ ಪರಿಣಾಮಗಳ ಬಗ್ಗೆ ಜನರಿಗೆ ಶಿಕ್ಷಣ ನೀಡುವ ಅಗತ್ಯತೆ ಇದೆ. ಭಯೋತ್ಪಾದನೆಯನ್ನು ಬೇರು ಸಮೇತ ನಿರ್ಮೂಲನೆ ಮಾಡುವತ್ತ ನಾವೆಲ್ಲರೂ ಸಕ್ರಿಯವಾಗಿ ಕೆಲಸ ಮಾಡಬೇಕಾಗಿದೆ ಎಂದು ಹೇಳಿದರು.



ಗ್ರಂಥಪಾಲಕ ಮಂಜುನಾಥ ಗಂಗನಳ್ಳಿ ಮಾತನಾಡಿ,
ರಾಷ್ಟ್ರದ ಶಾಂತಿ, ಅಭಿವೃದ್ಧಿಗೆ ಭಯೋತ್ಪಾದನೆಯು ತೊಡಕಾಗಿದ್ದು,ಅದರ ನಿರ್ಮೂಲನೆಗೆ ಎಲ್ಲರೂ ಜೊತೆ ಗೂಡಿ ಬೇರು ಸಹಿತ ಸರ್ವನಾಶ ಮಾಡುವ ದೃಢ ಸಂಕಲ್ಪದೊಂದಿಗೆ ಮುನ್ನುಗ್ಗಬೇಕಾಗಿದೆ ಎಂದು ಹೇಳಿದರು.
ಗ್ರಾಮದ ವಿಶ್ವನಾಥ ಹಂಡಿ, ಬಸವರಾಜ ಸಾರವಾಡ, ಸುರೇಶ ಕತ್ನಳ್ಳಿ, ಪ್ರವೀಣ ಅರ–ಕೇರಿ, ಶಂಕರ ಲೋಣಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಹೋದರನಿಂದಲೆ ಐದು ವರ್ಷದ ಬಾಲಕಿ: ಹತ್ಯೆಗೈದಿರುವ ಶಂಕೆ



**ಸಿಹಿ ಕಹಿ ಸುದ್ದಿ,**
**ರಾಯಭಾಗ :** ಹೌದು ವೀಕ್ಷಕರೇ ರಾಯಬಾಗ ತಾಲೂಕಿನ ನಿಪನಾಳ ಗ್ರಾಮದಲ್ಲಿ ರಾಜು ಮಡಿವಾಳ ಎಂಬ ವ್ಯಕ್ತಿ ಐದು ವರ್ಷದ ನಿಸ್ಕಸ್ಮಿ ಎಂಬ ಪುಟ್ಟ ಬಾಲಕಿಯನ್ನು ನಂಬಿಸಿ ಕ–ರೆದು ಕೊಂಡು ಹೋಗಿ ಊರಿನ ಕೆನಾಲ್ ಕಾಲುವೆಗೆ ಎಸೆದು ಪ್ರಾಣ ತೆಗೆದಿದ್ದಾನೆ ಎಂಬ ಶಂಕೆ ವ್ಯಕ್ತವಾಗುತ್ತಿದೆ ಸೋಮವಾರ ಸಾಯಂಕಾಲ 7: 30 ಕ್ಕೆ ಬಾಲಕಿಯನ್ನು ಕರೆದು ಕೊಂಡು ಹೋಗುವ ದೃಶ್ಯ ಸಿ.ಸಿ ಟೀವಿಯಲ್ಲಿ ಲಭ್ಯವಾಗಿದೆ ಬಾಲಕಿಯನ್ನು ಅಪಹರಿಸಿರುವ ವ್ಯಕ್ತಿ ರಾಜು ಮಡಿವಾಳ ಎಂಬಾತ ರಾಯಭಾಗ ಪೊಲೀಸರ ಅತಿಥಿಯಾಗಿದ್ದರು ಇನ್ನೂ ಸತ್ಯವನ್ನು ಬಾಯಿ ಬಿಡುತಿಲ್ಲಾ ಈ ಘಟನೆ ಏಕೆ ಮಾಡಿದನೆಂದು ಕಾರಣವನ್ನು ಹೇಳುತ್ತಿಲ್ಲಾ ಆರೋಪಿ ದಿನಕ್ಕೊಂದು ನಾಟಕ ವಾಡುತಿದ್ದಾನೆ ಒಂದು ಬಾರಿ ಕೆನಾಲ್ ಕಾಲುವೆಯಲ್ಲಿ ಎಸೆದಿದ್ದೇನೆ ಎಂದು ಹೇಳಿದರೆ ಮತ್ತೊಂದು ಬಾರಿ ಬಾವಿಯಲ್ಲಿ ಎಸೆದಿರುವ ಶಂಕೆ ವ್ಯಕ್ತಪಡಿಸುತಿದ್ದಾನೆಎಂದುರಾಯಭಾಗಪೊಲೀಸರುಕಂಪ್ಲೇಂಟ್ ತೆಗೆದುಕೊಂಡು ನಾಲ್ಕು ದಿನಗಳು ಕಳೆದರು ಆರೋಪಿಯಿಂದ ಸತ್ಯವನ್ನು ಬಾಯಿ ಬಿಡಿಸುವಲ್ಲಿ ವಿಫಲವಾಗುತಿದ್ದಾರೆ ಆದಷ್ಟು ಬೇಗ ಆರೋಪಿಯಿಂದ ಸತ್ಯವನ್ನು ಬಾಯಿ ಬಿಡಿಸಿ ನೊಂದಿರುವ ನಮ್ಮ ಕುಟುಂಬಕ್ಕೆ ನ್ಯಾಯ ಕೊಡಿಸಿ ನಮ್ಮ ಮಗಳನ್ನು ಹುಡುಕಿ ಕೊಡ ಬೇಕೆಂದು ಬಾಲಕಿಯ ಕುಟುಂಬಸ್ಥರು ಆಗ್ರಹಿಸಿದ್ದಾರೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಪರಶುರಾಮ.ಆರ್.ತೆಳಗಡೆ**

## ರಸ್ತೆ ಬಂದ್ ಮಾಡಿ ರೈತರಿಂದ ಪ್ರತಿಭಟನೆ




**ಸಿಹಿ ಕಹಿ ಸುದ್ದಿ,**
**ಮಾನ್ವಿ:** ಸರಕಾರ ಜೋಳ ಖರೀದಿ ಕೇಂದ್ರದ ಮೂಲಕ ನೋಂದಣಿ ಮಾಡಿದ ರೈತರ ಜೋಳವನ್ನು ಖರೀದಿ ಮಾಡದ ಹಿನ್ನೆಲೆಯಲ್ಲಿ ಮಾನ್ವಿ ಪಟ್ಟಣದ ಬಸವ ವೃತ್ತದಲ್ಲಿ ರೈತರು ರಾಜ್ಯ ಹೆದ್ದಾರಿ ರಸ್ತೆ ಬಂದ್ ಮಾಡಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.
ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಲ್ಲಿ ಖರೀದಿ ಕೇಂದ್ರದ ಮೂಲಕ ಯಾವ ರೀತಿಯಲ್ಲಿ ಕಾನೂನು ಬದ್ಧವಾಗಿ ಜೋಳ ಖರೀದಿ ಮಾಡಲಾಗುತ್ತದೆ ಎಂದು ಆಹಾರ
ಇಲಾಖೆ ಉಪ ನಿರ್ದೇಶಕ ಕೃಷ್ಣಪ್ಪ ಕಾಳಜಿ ವಹಿಸದ ಕಾರಣ ರೈತರ ದಿವಾಳಿಯಾಗಿ ರಸ್ತೆಗಿಳಿಯಲು ಕಾರಣವಾಗಿದೆ.
ರಾಯಚೂರು ಜಿಲ್ಲಾಡಳಿತದ ನಿರ್ಲಕ್ಷ್ಯದಿಂದ ನೋಂದಣಿ ಮಾಡಿದ ರೈತರ ಜೋಳವನ್ನು ಖರೀದಿ ಮಾಡುತ್ತಿಲ್ಲದ ಕಾರಣ ರೈತರ ಜೋಳಕ್ಕೆ ಏನಾದರು ಉಳು ಬಿದ್ದರೆ ನಷ್ಟ ಭರಿಸುವವರು ಯಾರು, ನಮಗೆ ನ್ಯಾಯಬೇಕು ಎಂದು ರೈತರು ಆಕ್ರೋಶ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಪಿಕೆಪಿಎಸ್ ನೂತನ ನಿರ್ದೇಶಕರಿಗೆ ಶಾಸಕರಿಂದ ಸನ್ಮಾನ



**ಕಮತಗಿ :** ಇಲ್ಲಿನ ಪಿಕೆಪಿಎಸ್ (ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ) ಚುನಾವಣೆಯಲ್ಲಿ ಆಯ್ಕೆಯಾದ ನೂತನ ನಿರ್ದೇಶಕರನ್ನು ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿರುವ ಹಾಗೂ ಹುನಗುಂದ ವಿಧಾನಸಭಾ ಕ್ಷೇತ್ರದ ಶಾಸಕರಾದ ವಿಜಯಾನಂದ ಎಸ್. ಕಾಶಪ್ಪನವರ ಅವರು ತಮ್ಮ ಗೃಹ ಕಚೇರಿಯಲ್ಲಿ ಆತ್ಮೀಯವಾಗಿ ಅಭಿನಂದಿಸಿ ಸನ್ಮಾನಿಸಿದರು.
ನಿರ್ದೇಶಕರಿಗೆ ಶಾಲು ಹೊದಿಸಿ, ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು. ಶಾಸಕರು ನೂತನ ನಿರ್ದೇಶಕರಿಗೆ ಶುಭ ಹಾರೈಸಿ, ಸಹಕಾರ ಕ್ಷೇತ್ರದಲ್ಲಿ ಜನತೆಗಾಗಿ ಪ್ರಾಮಾಣಿಕ ಸೇವೆ ಸಲ್ಲಿಸುವಂತೆ ಕರೆ ನೀಡಿದರು.
ಈ ಸಂದರ್ಭದಲ್ಲಿ ನಾಯಕರಾದ ಎಸ್.ಎಸ್. ಮಂಕಣಿ, ಪಟ್ಟಣ ಪಂಚಾಯತ್ ಸದಸ್ಯರುಗಳಾದ ದೇವಿಪ್ರಸಾದ ನಿಂಬಲಗುಂದಿ ಮತ್ತು ಬಸವರಾಜ ಕುಂಬಳಾವತಿ, ಯುವ ನಾಯಕ ವಿದ್ಯಾಧರ ಮಳ್ಳಿ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

## ನಗರದಲ್ಲಿ ಮೋಡ ಕವಿದ ವಾತಾವರಣ: ಗ್ರಾಮಗಳಲ್ಲಿ ಸುರಿದ ಮಳೆ



**ಇಳಕಲ್ :** ಮಧ್ಯಾಹ್ನದಿಂದಲೇ ನಗರದಲ್ಲಿ ಮೋಡ ಕವಿದ ವಾತಾವರಣ ಇದ್ದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಳೆ ಸುರಿದಿದೆ.
ತಾಲೂಕಿನ ಕೃಷ್ಣಾಪುರ ಗ್ರಾಮದಲ್ಲಿ ಸಿಡಿಲೊಂದು ಮರಕ್ಕೆ ಅಪ್ಪಳಿಸಿದೆ ಇದರಿಂದಾಗಿ ಹಲವಾರು ಗಿಡಗಳು ಸುಟ್ಟಿವೆ ಸುದೈವವಶಾತ ಯಾವುದೇ ಅಪಾಯವಾಗಿಲ್ಲ ಎಂದು ಹೇಳಲಾಗಿದೆ.
ಭರಣಿ ಮಳೆಯು ಕೈಕೊಟ್ಟು ಹೋದರೂ ಕೃತಿಕಾ ಮಳೆ ಸುರಿಯುವ ಲಕ್ಷಣಗಳು ಕಂಡು ಬರುತ್ತಿದೆ ಕಳೆದ ಎರಡು ದಿನಗಳಿಂದ ಗುಡಗು ಸಿಡಿಲಿನ ಅರ್ಭಟ ಸಂಜೆ ಮತ್ತು ರಾತ್ರಿ ನಗರದಲ್ಲಿ ಕೇಳಿ ಬರುತ್ತಲಿದೆ ಹೀಗಾಗಿ ಕೃತಿಕಾ ಮಳೆ ಸುರಿಯುವ ಬಗ್ಗೆ ರೈತರಲ್ಲಿ ಆಶಾಭಾವನೆ ತುಂಬಿಕೊಂಡಿದೆ.

**ವರದಿ ನಬಿ ಹುಣಚಗಿ**

## ಕೈಮಗ್ಗ ನೇಕಾರರಿಗೆ ರಾಜ್ಯ ಮಟ್ಟದ ಪ್ರಶಸ್ತಿಗೆ ಅರ್ಜಿ, ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕ ಫೀರಜಾದೆ

**ಇಲಕಲ್ :** ಕೈಮಗ್ಗ ನೇಕಾರರಿಗೆ ಬೆಂಬಲಿಸುವ ನಿಟ್ಟಿನಲ್ಲಿ ರಾಷ್ಟ್ರೀಯ ಕೈಮಗ್ಗ ದಿನಾಚರಣೆಯಂದು ರಾಜ್ಯ ಮಟ್ಟದ ಪ್ರಶಸ್ತಿ ನೀಡುವ ಸಲುವಾಗಿ ಅರ್ಜಿ ಆಹ್ವಾನಿಸಲಾಗಿದೆ. ಕೈಮಗ್ಗ ನೇಕಾರರು ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರ ಕಚೇರಿಯಿಂದ ಅರ್ಜಿ ನಮೂನೆ ಪಡೆದುಕೊಂಡು ಭರ್ತಿ ಮಾಡಿದ ಅರ್ಜಿ ಮತ್ತು ಅರ್ಜಿದಾರರು ತಯಾರಿಸಿದ ಕೈಮಗ್ಗ ಉತ್ಪನ್ನದ ಮಾದರಿಗಳನ್ನು ಮೇ 26 ರೊಳಗಾಗಿ ಕೈಮಗ್ಗ ನೇಕಾರರು ಕೈಮಗ್ಗ ಮತ್ತು ಜವಳಿ ಇಲಾಖೆ ಉಪನಿರ್ದೇಶಕರ ಕಚೇರಿಗೆ ಸಲ್ಲಿಸುವಂತೆ ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪನಿರ್ದೇಶಕ ಫೀರಜಾದೆ ತಿಳಿಸಿದ್ದಾರೆ.ಹೆಚ್ಚಿನ ಮಾಹಿತಿಗಾಗಿ ದೂಸಂ.08354–235463, ಸಹಾಯಕ ನಿರ್ದೇಶಕ ಸಂತೋಷ ಚಾರಖಾನಿ(9008941033), ಸತೀಶ ಕಮಲದಿನ್ನಿ (9620304021) ಸಂಪರ್ಕಿಸಬಹುದಾಗಿದೆ.

**ವರದಿ: ಸಯ್ಯದ್ ಸಿರಾಜ್ ಖಾಜಿ**

## ಎಂ.ಎಲ್.ಸಿ ಪೂಜಾರ ವಿರುದ್ಧ ಅಶಿಸ್ತು ಭಾಷೆ ಬಳಕೆ: ಶಿಸ್ತು ಕ್ರಮಕ್ಕೆ ಪೂಜಾರ ಬಣ ಆಗ್ರಹ

**ಬಾಗಲಕೋಟೆ :** ಜಿಲ್ಲೆಯ ಬಿಜೆಪಿ ಘಟಕದಲ್ಲಿ ಬಣ ಬಡಿದಾಟ ಮತ್ತಷ್ಟು ತೀವ್ರತೆ ಪಡೆದಿದ್ದು, ಎಂ.ಎಲ್.ಸಿ ಪಿ.ಎಚ್. ಪೂಜಾರ ವಿರುದ್ಧ ಅಶಿಸ್ತು ಭಾಷೆ ಬಳಸಿದ ಕೆಲ ಬಿಜೆಪಿ ಪದಾಧಿಕಾರಿಗಳ ವಿರುದ್ಧ ಕಠಿಣ ಶಿಸ್ತು ಕ್ರಮ ಜರುಗಿಸಬೇಕೆಂದು ಪೂಜಾರ ಬಣದ ಮುಖಂಡರು ಆಗ್ರಹಿಸಿದ್ದಾರೆ.
ನವನಗರದಲ್ಲಿರುವ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿಡಾ.ಶೇಖರಮಾನೆ ನೇತೃತ್ವದಲ್ಲಿ ಪೂಜಾರ ಬಣದವರು ಜಿಲ್ಲಾ ಅಧ್ಯಕ್ಷ ಶಾಂತಗೌಡ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು. ಈ ಸಂದರ್ಭದಲ್ಲಿಏಕವಚನಭಾಷೆಬಳಸಿದ ಬಿಜೆಪಿ ಮುಖಂಡರನ್ನು ಪಕ್ಷದಿಂದ ಉಚ್ಚಾಟಿಸಬೇಕೆಂಬ ಆಗ್ರಹವೂ ವ್ಯಕ್ತವಾಯಿತು. ಮನವಿ ಸಲ್ಲಿಸಿದ ಬಳಿಕ ಪೂಜಾರ ಬಣದವರೊಂದಿಗೆ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ ಆಂತರಿಕ ಸಭೆ ನಡೆಸಿದ್ದು, ಪಕ್ಷದಲ್ಲಿ ಒಗ್ಗಟ್ಟು ಕಾಯ್ದುಕೊಳ್ಳುವ ಕುರಿತು ಮಾರ್ಗದರ್ಶನ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ. ಈ ನಡುವೆ, ಮಾಜಿ ಶಾಸಕ ಡಾ. ವೀರಣ್ಣ ಚರಂತಿಮಠ ಹಾಗೂ ಎಂ.ಎಲ್.ಸಿ ಪೂಜಾರ ಬಣಗಳ ನಡುವೆ ಇರುವ ಬಣ ಬಡಿದಾಟ ಮತ್ತೊಂದು ಹಂತ ತಲುಪಿದ್ದು, ಈ ವಿಷಯ ಇದೀಗ ರಾಜ್ಯ ಬಿಜೆಪಿ ಅಧ್ಯಕ್ಷರ ಗಮನಕ್ಕೆ ಹೋಗುವ ಸಾಧ್ಯತೆ ಉಂಟಾಗಿದೆ. ಇದಕ್ಕೂ ಮೊದಲು ಡಾ. ಚರಂತಿಮಠ ಬಣದ ಮುಖಂಡರಾದ ರಾಜು ನಾಯ್ಕರ್, ರಾಜು ರೇವಣಕರ, ಸುರೇಶ ಕೊಣ್ಣೂರ, ಸತ್ಯನಾರಾಯಣ ಹೇಮಾದ್ರಿ, ಶಿವಾನಂದ ಟವಳಿ ಹಾಗೂ ಬಸವರಾಜ ಅವರಾದಿ ನೇತೃತ್ವದಲ್ಲಿ ಪತ್ರಿಕಾಗೋಷ್ಠಿ ನಡೆಸಿದ್ದು, ಈ ವೇಳೆ ಅವರು ಪೂಜಾರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದರು. ಇದರಿಂದ ಬಾಗಲಕೋಟೆ ಬಿಜೆಪಿ ಘಟಕದಲ್ಲಿ ನಡೆಯುತ್ತಿರುವ ರಾಜಕೀಯ ಅಂತರ ಸಂಘರ್ಷ ಮತ್ತಷ್ಟುಉಲ್ಬಣಗೊಂಡಿದ್ದು,ಮುಂದಿನ ದಿನಗಳಲ್ಲಿ ಇದರ ಪ್ರಭಾವ ಜಿಲ್ಲೆ ಹಾಗೂ ರಾಜ್ಯ ಮಟ್ಟದಲ್ಲಿ ಕಂಡುಬರುವ ಸಾಧ್ಯತೆ ಇದೆ.



ಈ ಸಂದರ್ಭದಲ್ಲಿ ಎಸ್.ಎ. ಪಾಟೀಲ, ಟಿ.ವಿ. ಗಿರಿಜಾ, ಮಲ್ಲಿಕಾರ್ಜುನ ಸುರಪುರ, ವೀರಣ್ಣ ಚಿತ್ತವಾಡಗಿ, ಸಂಗನಗೌಡ ಗೌಡರ, ಕಳಕಪ್ಪ ಬಾದೋಡಗಿ, ಅಮೀತ ನವಲಗುಂದ, ವಿ.ಎಸ್. ಅಮೃತಕರ, ಮಂಜುನಾಥ ಚವ್ಹಾಣ, ಯುವರಾಜ ಲಮಾಣಿ, ಸಂಜೀವಪ್ಪ ಡಿಗ್ಗಿ, ಬಸವರಾಜ ಹೊಸಮನಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

### ಸಂಭ್ರಮದ ಜಾತ್ರಾ ಮಹೋತ್ಸವ

## ಭಕ್ತರು ಅಗ್ನಿಯಲ್ಲಿ ಹಾಯ್ದು ಭಕ್ತಿ ಸಮರ್ಪಣೆ

**ಕಲಾದಗಿ :** ಗ್ರಾಮದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಮಾದರ ಕಾಲೋನಿಯ ಹೂವಿನಮ್ಮ ನಡೆಗರಮ್ಮ ಅಗೀನ ಜಾತ್ರಾ ಮಹೋತ್ಸವ ಸಡಗರ ಸಂಭ್ರಮದೊಂದಿಗೆ ಶ್ರದ್ಧಾ ಭಕ್ತಿಯಿಂದ ನಡೆಯಿತು.
ಜಾತ್ರೆ ಎರಡನೇ ದಿನವಾದ ಮಂಗಳವಾರ ಬೆಳಗ್ಗೆ ದೇವಿಯರ ಪಲ್ಲಕ್ಕಿ ಮಹೋತ್ಸವದೊಂದಿಗೆ ಘಟಪ್ರಭಾ ನದಿಗೆ ತೆರಳಿ ಮಂಗಲಸ್ನಾನ ಸಮರ್ಪಣೆ ನಡೆಯಿತು.
ನಂತರ ನಡೆಗೆರಮ್ಮ ದೇವಸ್ಥಾನದ ಮುಂಭಾಗದಲ್ಲಿ 20 ಅಡಿ ಉದ್ದದ ಅಗ್ನಿಕೊಂಡದಲ್ಲಿ ದೇವಿಯರ ಪಲ್ಲಕ್ಕಿ ಅಗ್ನಿ ಪ್ರವೇಶ ನಡೆಯಿತು. ತದನಂತರ 200ಕ್ಕೂ ಅಧಿಕ ಭಕ್ತರು ಅಗ್ನಿ ಹಾಯ್ದು



ಭಕ್ತಿ ಸಮರ್ಪಣೆ ಮಾಡಿದರು. ದೇವಸ್ಥಾನ ಆವರಣದಲ್ಲಿ ಅನ್ನ ಸಂತರ್ಪಣೆ ನಡೆಯಿತು.



## ತಂಪು ಎರೆದ ಮಳೆರಾಯ

**ಕಲಾದಗಿ :** ಮಂಗಳವಾರ ಸಾಯಂಕಾಲ ಕಲಾದಗಿ ಪಟ್ಟಣದ ಸುತ್ತಮುತ್ತಲು ಒಂದುವರೆ ಗಂಟೆ ಉತ್ತಮ ಮಳೆಯಾಗಿದ್ದು. ಬಿಸಿಲಿನ ತಾಪದಿಂದ ಬೇಸತ್ತದ ಜನತೆಗೆ ಮಳೆರಾಯ ತಂಪನ್ನು ಎರೆದಿದ್ದಾನೆ. ರೈತರ ಮೊಗದಲ್ಲಿ ಮಂದಹಾಸ ಮೂಡಿದೆ. ಕೃಷಿ ಚಟುವಟಿಕೆಗಳಿಗೆ ಚಾಲನೆ ನೀಡಿದಂತಾಯಿತು. ಮಳೆ ಎನ್ನುತ್ತಿದ್ದಾರೆ ರೈತರು.

# ಸುಪ್ರೀಂಕೋರ್ಟ್ ತೀರ್ಪಿನನ್ವಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ನಿವೃತ್ತಿ ಒಪ್ಪಂದ ಜಾರಿಗೊಳಿಸಲು ಒತ್ತಾಯ

**ಬಳ್ಳಾರಿ :** ಕರ್ನಾಟಕ ರಾಜ್ಯ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ದುಡಿಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಗ್ರಾಚ್ಯುಟಿ ಪಾವತಿ ಕಾಯಿದೆ 1972ರ ಅಡಿಯಲ್ಲಿ ಗ್ರಾಚ್ಯುಟಿ (ನಿವೃತ್ತಿ ಉಪಧನ) ಪಡೆಯಲು ಅರ್ಹರು ಎಂಬುದಾಗಿ ಸುಪ್ರೀಂಕೋರ್ಟ್ ಅತ್ಯಂತ ಮಹತ್ವದ ತೀರ್ಪನ್ನು ಇತ್ತೀಚೆಗೆ ಅಂದರೆ
25ನೇಏಪ್ರಿಲ್2022ರಂದುಸುಪ್ರೀಂಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಅಭಯ್ ಎಸ್ ಓಕಾ ರವರ ನೇತೃತ್ವದ ನ್ಯಾಯಪೀಠ ಅಂಗನವಾಡಿ ನೌಕರರ ಕೆಲಸ ಕಾರ್ಯಗಳನ್ನು ಸೂಕ್ಷ್ಮವಾಗಿ ಗಮನಿಸಿ ಅವರ ಕೆಲಸವು ಅರಕಾಲಿಕವಲ್ಲ, ಅಂಗನವಾಡಿ ನೌಕರರು ಪೂರ್ಣ ಸಮಯದ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ ಎಂದು ಅಭಿಪ್ರಾಯಗೊಂಡು ಅವರಿಗೆ ಸಲ್ಲಬೇಕಾದ ನಿವೃತ್ತಿ ವೇತನ ಹಾಗೂ ಗ್ರಾಚುಟಿ ನೀಡಲು ಕ್ರಮ ಕೈಗೊಳ್ಳಬೇಕೆಂದು ಸ್ಪಷ್ಟವಾಗಿ ಆದೇಶವನ್ನು ನೀಡಿದೆ ಅದೇ ಪ್ರಕಾರವಾಗಿ ನಮಗೆ ರಾಜ್ಯ ಸರ್ಕಾರ ಗ್ರಾಚುಟಿ ಮತ್ತು ನಿವೃತ್ತಿ ವೇತನವನ್ನು ಒದಗಿಸಿ ಕೊಡಬೇಕೆಂದು ಅಂಗನವಾಡಿ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷರು ಹಾಗೂ ರಾಜ್ಯ ಸಂಘಟನಾ ಕಾರ್ಯದರ್ಶಿಯಾದ ಆರ್ಕಾಣಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು.

ಅವರು ಇಂದು ಬಳ್ಳಾರಿ ಜಿಲ್ಲಾ ಅಧಿಕಾರಿಗಳ ಸ್ಥಾನಿಕ ಅಧಿಕಾರಿ ತಾಸಿಲ್ದಾರ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರುಗಳು ನಿಯಮಿತವಾದ ಸಂಬಳ ಹಾಗೂ ಮತ್ತಿತರ ಸೌಲತ್ತುಗಳಿಂದಲೂ ವಂಚಿತರಾಗಿದ್ದಾರೆ.

ಅವರುಗಳು ನಿರ್ವಹಿಸುವ ಕೆಲಸ ಶಾಸನಬದ್ಧವಾಗಿದ್ದರೂ ಸಹ ಅದನ್ನು ನಾಗರಿಕ ಸೇವೆಯಿಂದಾಗಲೀ ಅಥವಾ ನಾಗರಿಕ ಹುದ್ದೆ ಎಂಬುದಾಗಿಯೂ ಪರಿಗಣಿಸುವುದಿಲ್ಲ. ಹಾಗೂ ಕನಿಷ್ಠ ವೇತನಕ್ಕಿಂತ ಕಡಿಮೆ ಗೌರವ ಧನದಲ್ಲಿ ದುಡಿಸಿಕೊಳ್ಳಲಾಗುತ್ತಿದೆ ಎಂಬುದನ್ನು ಸರ್ವೋಚ್ಚ ನ್ಯಾಯಾಲಯ ಗಂಭೀರವಾಗಿ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ.

ವೇತನದ ವ್ಯಾಖ್ಯಾನವು ತುಂಬಾ ವಿಶಾಲವಾಗಿದೆ. ಅಂಗನವಾಡಿ ನೌಕರರು ಪಡೆಯುವ ಗೌರವ ಧನವೂ ಕೂಡ



ವೇತನದ ವ್ಯಾಖ್ಯಾನಕ್ಕೆ ಒಳಪಡುವುದರಿಂದ ವೇತನಕ್ಕಾಗಿಯೇ ನೇಮಕಗೊಂಡಿರುವ ಅಂಗನವಾಡಿಗಳ ಕಾರ್ಯಕರ್ತೆ ಮತ್ತು ಸಹಾಯಕಿಯರು 1972ರ ಗ್ರಾಚ್ಯುಟಿ ಪಾವತಿ ಕಾಯ್ದೆಯ ಪ್ರಕಾರ ಅವರು ನೌಕರರಾಗಿರುತ್ತಾರೆ ಎಂದು ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಸ್ಪಷ್ಟಿಕರಿಸಿದೆ.

ಅಷ್ಟೇ ಅಲ್ಲದೆ 1972ರ ಗ್ರಾಚ್ಯುಟಿ ಪಾವತಿ ಕಾಯಿದೆಯ ಪ್ರಕಾರ ಯಾವುದೇ ಉದ್ಯೋಗ ಘಟಕದಲ್ಲಿ ಐದು ವರ್ಷ ಸೇವೆ ಪೂರ್ಣಗೊಳಿಸಿ ಸ್ವಯಂ ನಿವೃತ್ತಿ ಆದವರು ಸಹ ರಾಜಕೀಯ ಪಡೆಯಲು ಅರ್ಹತೆಯನ್ನು ಪಡೆದುಕೊಳ್ಳುತ್ತಾರೆ ಹಾಗೂ ಪೂರ್ಣಕಾಲಿಕ ಸೇವೆ ಸಲ್ಲಿಸಿ ನಿವೃತ್ತರಾದವರಿಗೆ ನಿವೃತ್ತಿಗೊಂಡ 30 ದಿನಗಳಲ್ಲಿ ಅವರಿಗೆ ಸಲ್ಲಬೇಕಾದ ಗ್ರಾಚ್ಯುಟಿ ಮೊತ್ತವನ್ನು ಪಾವತಿಸಬೇಕಾಗುತ್ತದೆ.

ಗ್ರಾಚ್ಯುಟಿ ಪಾವತಿಯಲ್ಲಿ ವಿಳಂಬವಾದರೆ ಶೇಕಡಾ 10 ರಷ್ಟು ಬಡ್ಡಿ ಸಮೇತ ಸೇರಿಸಿ ಗ್ರಾಚ್ಯುಟಿ ಮೊತ್ತವನ್ನು ನೀಡಬೇಕೆಂಬುದು ಗ್ರಾಚ್ಯುಟಿ ಪಾವತಿಯ ಕಾಯ್ದೆಯ ನಿಬಂಧನೆಯಲ್ಲಿ ತಿಳಿಸಲಾಗಿದೆ.

ಈ ಕಾಯ್ದೆ ಅಡಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಸಹ ಕೇಂದ್ರ ಮತ್ತು ರಾಜಕೀಯ ರಾಜ್ಯ ಸರ್ಕಾರಗಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿಯಲ್ಲಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಲ್ಲಿ ಸಿಡಿಪಿಓ ಆಧೀನದಲ್ಲಿರುವ ಐಸಿಡಿಎಸ್ ಯೋಜನೆ (ಪ್ರಾಜೆಕ್ಟ್) ಗಳಲ್ಲಿ ಕೆಲಸ ನಿರ್ವಹಿಸುವ ಉದ್ಯೋಗಿಗಳಾಗಿರುವುದರಿಂದ ಗ್ರಾಚ್ಯುಟಿ ಕಾಯಿದೆಯ ವ್ಯಾಪ್ತಿಗೆ ಒಳಪಡುತ್ತಾರೆ ಹಾಗೂ ಕಾಯ್ದೆಯ ಪ್ರಕಾರ ಉದ್ಯೋಗಿಯು ಮರಣ ಹೊಂದಿದರೆ ಅವರ ನಾಮಿನಿ ಅಥವಾ ವಾರಸುದಾರರಿಗೆ ಗ್ರಾಚ್ಯುಟಿ ಪಡೆಯಲು ಕಾನೂನು ಬದ್ಧ ಹಕ್ಕುದಾರರಾಗಿರುತ್ತಾರೆ ಎಂಬುದನ್ನು ಗ್ರಾಚ್ಯುಟಿ ಕಾಯಿದೆ ಸ್ಪಷ್ಟಿಕರಿಸಿದೆ.

ಆದುದರಿಂದ ಅಂಗನವಾಡಿ ನೌಕರರಿಗೆ ಗ್ರಾಚ್ಯುಟಿ ನೀಡುವುದು ಸರ್ಕಾರದ ಹೊಣೆಗಾರಿಕೆಯಾಗಿರುತ್ತದೆ ಕೂಡಲೇ ಗ್ರಾಚುಟಿ ಮತ್ತು ನಿವೃತ್ತಿ ವೇತನ ನೀಡಲು ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಅವರು ಆಗ್ರಹಿಸಿದರು

ಕರ್ನಾಟಕ ರಾಜ್ಯ ಸರ್ಕಾರದ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಗ್ರಾಚ್ಯುಟಿ ನೀಡಲು ನಿರ್ಧರಿಸಿದ್ದು, ಅದನ್ನು 2023 ರಿಂದ ನಿವೃತ್ತರಾದವರಿಗೆ ಮಾತ್ರ ಅನ್ವಯಿಸುತ್ತದೆ ಎಂಬುದಾಗಿ ಘೋಷಿಸಿರುವುದು 1972ರ ಗ್ರಾಚ್ಯುಟಿ ಕಾಯಿದೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ.
1975ರಲ್ಲಿ ಪ್ರಾರಂಭವಾದ ಐಸಿಡಿಎಸ್ ಯೋಜನೆಗೆ ಇದೀಗ 50 ವರ್ಷಗಳಾಗುತ್ತಿದ್ದು, ಸೇವೆಗೆ ಸೇರಿದ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರು 2011–12ನೇ ಸಾಲಿನಿಂದಲೇ ಕಾಲಕಾಲಕ್ಕೆ ನಿವೃತ್ತರಾಗುತ್ತಾ ಬರುತ್ತಿದ್ದಾರೆ. ಈಗಾಗಲೇ ನಿವೃತ್ತರಾಗಿರುವ ಕಾರ್ಯಕರ್ತೆಯರು ಸಹಾಯಕಿಯರಲ್ಲಿ ಬಹುತೇಕರುಮರಣಹೊಂದಿದ್ದು,ಉಳಿದವರು ಕಾಯಿಲೆಗಳಿಗೆ ತುತ್ತಾಗಿ ಆರ್ಥಿಕ ಸಂಕಷ್ಟಗಳು ತರಹದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ.

ಆದುದರಿಂದ 2023ರ ನಂತರ ನಿವೃತ್ತರಾಗುವವರೆಗೆ ಗ್ರಾಚ್ಯುಟಿ ನೀಡುವ ಸರ್ಕಾರದ ನಿರ್ಧಾರವನ್ನು ಮಾರ್ಪಡಿಸಿ 1975 ರಿಂದ ಸೇವೆಗೆ ಸೇರಿ 2011–12 ರಿಂದ ನಿವೃತ್ತರಾದ ಎಲ್ಲಾ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರಿಗೆ ಅನ್ವಯವಾಗುವಂತೆ ಗ್ರಾಚ್ಯುಟಿ ಸೌಲಭ್ಯವನ್ನು ಜಾರಿಗೊಳಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷೆ ಹಾಗೂ ರಾಜ್ಯ ಕಾರ್ಯದರ್ಶಿ ಆರ್ಕಾಣಿ, ಈ.ಮಂಗಮ್ಮ, ಪಿಡಿ ಮೀನಾ ಕುಮಾರಿ, ಃ ಎರಮ್ಮ, ಟೀ ಇಂದಿರಾ ಟೀ ಪುಷ್ಪವತಿ ಸೇರಿದಂತೆ ಅಂಗನವಾಡಿ ಕಾರ್ಯಕರ್ತೆಯರು ಸಹಾಯಕರು ಇದ್ದರು.

**ವರದಿ : ಇಜಿ ರೆಡ್ಡಿ**

# ಬಳ್ಳಾರಿಯಲ್ಲಿ ದೇಶದ ಹೆಮ್ಮೆಯ ತ್ರಿವರ್ಣ ಧ್ವಜ ಪೆರೇಡ್





**ಬಳ್ಳಾರಿ :** ಭಾರತದ ಸೇನೆ ಪಾಕಿಸ್ತಾನದ ಉಗ್ರವಾದಿಗಳ ಮೇಲೆ ನಡೆಸಿರುವ 'ಆಪರೇಷನ್ ಸಿಂಧೂರ' ಯಶಸ್ವಿಯಾದ ಹಿನ್ನೆಲೆಯಲ್ಲಿ ಇಂದು ನಗರದ ಮತ್ತು ಜಿಲ್ಲೆಯ ಮಾಜಿ ಸೈನಿಕರಿಂದ ಹಾಗೂ ಬಿಜೆಪಿಯಿಂದ ಬಳ್ಳಾರಿಯಲ್ಲಿ ಬೃಹತ್ ತಿರಂಗಾ ಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ಇಂದು ನಗರದಲ್ಲಿ ಇಂದು ಮಾಜಿ ಯೋಧರೊಂದಿಗೆ ಜೊತೆಗೂಡಿ ಭಾರತೀಯ ಸೇನೆ ಪಾಕಿಸ್ತಾನದ ಮೇಲೆ ನಡೆಸಿದ ಯಶಸ್ವಿ ಆಪರೇಷನ್ ಸಿಂದೂರ್ ಹೆಸರಿನಲ್ಲಿ ನಡೆಸಿದ ಮಿಲಿಟರಿ ಕಾರ್ಯಾಚರಣೆ ಯಶಸ್ವಿ ಆದ ಹಿನ್ನೆಲೆಯಲ್ಲಿ
ತಿರಂಗಾ ಯಾತ್ರೆ ನಡೆಸಿದರು.

ಅಪರೇಷನ್ ಸಿಂಧೂರ ವಿಜಯೋತ್ಸವದಲ್ಲಿ ಭಾರತೀಯ ಜನತಾ ಪಕ್ಷದ ಎಲ್ಲಾ ಪದಾಧಿಕಾರಿಗಳು ಮಂಡಲ ಪದಾಧಿಕಾರಿಗಳು ಮುಖಂಡರು ಹಾಗೂ ನೂರಾರೂ ಕಾರ್ಯಕರ್ತರ ಜೊತೆಗೆ ಹಲವಾರು ಜನ ಮಾಜಿ ಸೈನಿಕರು ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಎಲ್ಲರ ಕೈಯಲ್ಲಿ ಭಾರತ ದೇಶದ ಹೆಮ್ಮೆಯ ತ್ರಿವರ್ಣ ಧ್ವಜವನ್ನು ಹಿಡಿದು ಜೈ ಜವಾನ್ ಜೈ ಕಿಸಾನ್ ಎಂದು ಘೋಷಣೆಗಳನ್ನು ಕೂಗುತ್ತಾ ಹೆಮ್ಮೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ನೆರೆದ ಎಲ್ಲರ ಬಾಯಲ್ಲಿ ಭಾರತ್ ಮಾತಾ ಕೀ ಜೈ ಘೋಷಣೆ ರಸ್ತೆಯುದ್ದಕ್ಕೂ ಪ್ರತಿಧ್ವನಿಸುತಿತ್ತು ಮಾಜಿ ಸೈನಿಕರ ಮುಖದಲ್ಲಿ ಮಂದಹಾಸ ಜೊತೆಗೆ ನಮ್ಮ ಸೇನೆಯ ನಡೆಯ ಬಗ್ಗೆ ಅತ್ಯಂತ ಆತ್ಮವಿಶ್ವಾಸವನ್ನು ವ್ಯಕ್ತಪಡಿಸುತ್ತಾ ಮಾಜಿ ಸೈನಿಕರು ಹೆಜ್ಜೆ ಹಾಕಿದರು. ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಹಲವಾರು ಜನ ಕಾರ್ಯಕರ್ತರು ಹಾಗೂ ನೂರಾರು ಜನ ಯುವಕ ಯುವತಿಯರು ಮತ್ತು ಮಾಜಿ ಸೈನಿಕರು ಭಾಗವಹಿಸಿದ್ದರು ಮತ್ತು ಹಲವು ಜನ ಮಾಜಿ ಸೈನಿಕರು ಭಾಗವಹಿಸಿದ್ದರು.

**ವರದಿ ಇಜಿ ರೆಡ್ಡಿ**

# ವಿಶೇಷ ಚೇತನ ಬಾಲಕಿಯ ಮೇಲೆ ಅತ್ಯಾಚಾರ, ಕೊಲೆ, ಖಂಡಿಸಿ ಹೊಸಪೇಟೆಯಲ್ಲಿ ಬೃಹತ್ ಪ್ರತಿಭಟನೆ

**ಹೊಸಪೇಟೆ :** ನಗರದಲ್ಲಿ ವಿಶೇಷ ಚೇತನರ ಅನೇಕ ಸಂಘ ಸಂಸ್ಥೆಗಳು ಒಕ್ಕಟ್ಟಾಗಿ ಸೇರಿ, ರಾಮನಗರ ಜಿಲ್ಲೆಯ ಬಿಡದಿ ತಾಲೂಕಿನ ಬದ್ರಾಪುರ ಎಂಬ ಗ್ರಾಮದ ,ಖುಷಿ ಎಂಬ ಹದಿನಾಲ್ಕು ವರ್ಷದ ವಿಶೇಷ ಚೇತನ ಬಾಲಕಿಯ ಮೇಲೆ ಅತ್ಯಾಚಾರ ಹಾಗೂ ಕೊಲೆ ಘಟನೆಯನ್ನು ಖಂಡಿಸಿ , ವಿಶೇಷ ಚೇತನರ ಸಂಘದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಿ, ಹೊಸಪೇಟೆಯ ತಾಸಿಲ್ದಾರರ ಮೂಲಕ
ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.



ಹೊಸಪೇಟೆಯ ತಾಲೂಕು ಕಚೇರಿಗೆ ಆಗಮಿಸಿದ ಸರ್ವ ವಿಕಲಾಚೇತನರು, ಬಾಲಕಿಯ ಮೇಲೆ ನಡೆದಂತಹ ಅತ್ಯಾಚಾರ ಹಾಗೂ ಕೊಲೆಯನ್ನು ತೀರ್ವ ತೆರನಾಗಿ ಖಂಡಿಸಿ , ಮುಖ್ಯಮಂತ್ರಿಗಳು ,ತಪ್ಪಿತಸ್ಥರ ಮೇಲೆ ಶೀಘ್ರವೇ ಕಠಿಣ ಕಾನೂನು ಕ್ರಮವನ್ನು ಜರುಗಿಸಬೇಕೆಂದು ತಮ್ಮಗಳ ಘೋಷವಾಕ್ಯವನ್ನು ಕೂಗುವ ಮೂಲಕ ತಮ್ಮ ಆಕ್ರೋಶ ವ್ಯಕ್ತಪಡಿಸಿ ಮುಖ್ಯಮಂತ್ರಿಗಳಿಗೆ ಆಗ್ರಹಿಸಿದರು. ತಕ್ಷಣವೇ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಳ್ಳದಿದ್ದರೆ ,ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟವನ್ನು ಮಾಡುವುದಾಗಿ ಎಚ್ಚರಿಕೆಯನ್ನು ಸಹ ನೀಡಿದರು.ಇಂಥಪಾಪಿಗಳಿಗೆಕಾನೂನಿನಲ್ಲಿ ತಿದ್ದುಪಡಿ ತಂದು, ತಕ್ಷಣವೇ ಕಾನೂನು ಕ್ರಮ ತೆಗೆದುಕೊಂಡರೆ ಮಾತ್ರ ಇಂತಹ ಅಮಾನುಷ ಘಟನೆಗಳು ನಡೆಯುವುದು ತಪ್ಪುತ್ತದೆ.. ಇಲ್ಲವಾದರೆ ಕೆಲವೇ ದಿನಗಳಲ್ಲಿ ಬೇಲ್ ಮೇಲೆ ಹೊರಗೆ ಬಂದು, ಇಂತಹ ದುಷ್ಕೃತ್ಯಗಳು ನಡೆಯುತ್ತಲೇ ಇರುತ್ತದೆ .ಹಾಗಾಗಿ ಮುಖ್ಯಮಂತ್ರಿಗಳು ತಕ್ಷಣವೇ ಕಾನೂನಿಗೆ ತಿದ್ದುಪಡಿ ತಂದು ಕಠಿಣ ಕಾನೂನು ಕ್ರಮ ಜರುಗಿಸಬೇಕಾಗಿ ಒತ್ತಾಯಿಸಿದ್ದಾರೆ.ಪ್ರತಿಭಟನೆಯಲ್ಲಿ
ಲೋಹಿತ್ ತಳವಾರ್ ಅಧ್ಯಕ್ಷರು,ಉಪಾಧ್ಯಕ್ಷರಾದ ಭಾಷಾರವರು ,ಹುಲಿಗೆಮ್ಮನವರು ,ಎ ,ಎಂ, ಬಸವರಾಜ್ ರವರು , ಶಿವಕುಮಾರ್ ರವರು ಹಾಗೂ ಸರ್ವ ವಿಕಲಾಚೇತನ ಬಂಧುಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಮತ್ತು ಹೊಸಪೇಟೆ ನಗರ ಘಟಕದ ವಿಶೇಷ ಚೇತನರ ಸಂಘದ ಸರ್ವ ಬಂಧುಗಳು ಪ್ರತಿಭಟನೆಯಲ್ಲಿ ಭಾಗಿಗಳಾಗಿದ್ದರು.

**ವರದಿ ಅಂಬರೀಶ್ ನಾಯಕ್**

# ವಿಶ್ಲೇಷಣೆ | ನವತಾರೆಗಳ ನಿರೀಕ್ಷೆಯಲ್ಲಿ ಭಾರತ ಕ್ರಿಕೆಟ್

## ದಿಗ್ಗಜರ ನಿವೃತ್ತಿ: ಯುವ ಆಟಗಾರರಿಗೆ ಸಾಮರ್ಥ್ಯ ತೋರಲು ಸುವರ್ಣಾವಕಾಶ



ಐದು ತಿಂಗಳ ಅವಧಿಯಲ್ಲಿ ಈ ಮೂವರು 'ಮೆಗಾಸ್ಟಾರ್'ಗಳು ನಿವೃತ್ತಿ ಘೋಷಿಸಿದ್ದಾರೆ. ಅವರಲ್ಲಿ ಅಶ್ವಿನ್ ಮಾತ್ರ ಅಂತರರಾಷ್ಟ್ರೀಯ ಕ್ರಿಕೆಟ್‌ನ ಮೂರೂ ಮಾದರಿಗಳಿಗೆ ವಿದಾಯ ಹೇಳಿದರು. ರೋಹಿತ್ ಮತ್ತು ವಿರಾಟ್ ಅವರು ಅಂತರರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ಮಾತ್ರ ಆಟ ಉಳಿಸಿಕೊಂಡಿದ್ದಾರೆ. ನವಯುಗದ ಬಹುದೊಡ್ಡ ಕ್ರಿಕೆಟ್ ತಾರೆಗಳಾಗಿರುವ ರೋಹಿತ್ ಮತ್ತು ವಿರಾಟ್ ಹಿಂದಿನ ಒಂದು ವಾರದ ಅವಧಿಯಲ್ಲಿ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಇದು ಕ್ರಿಕೆಟ್ ವಲಯವನ್ನು ಅಚ್ಚರಿಗೆ ತಳ್ಳಿದೆ.

ಅದೂ ಮುಂದಿನ ತಿಂಗಳು ಭಾರತ ತಂಡವು ಇಂಗ್ಲೆಂಡ್ ಪ್ರವಾಸಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ರೋಹಿತ್?ಕೊಹ್ಲಿ ಅವರ ನಿರ್ಣಯ ಹಲವು ಚರ್ಚೆಗಳನ್ನು ಹುಟ್ಟುಹಾಕಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ನಾಲ್ಕು ಗೋಡೆಗಳ ನಡುವೆ ಏನೋ ನಡೆದಿದೆ ಎಂಬ ಗುಮಾನಿಯನ್ನೂ ಮೂಡಿಸಿರುವುದು ಸುಳ್ಳಲ್ಲ. ಆದರೆ ಐದು ತಿಂಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ಭಾರತ ತಂಡವು ಬಾರ್ಡರ್?ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಹೀನಾಯವಾಗಿ ಸೋತಾಗ ಇವರಿಬ್ಬರೂ ಹೆಚ್ಚು ಟೀಕೆಗಳಿಗೆ ತುತ್ತಾಗಿದ್ದರು. ಅದಕ್ಕೆ ಕಾರಣ ಅವರ ಕಳಪೆ ಬ್ಯಾಟಿಂಗ್ ಫಾರ್ಮ್.

ರೋಹಿತ್ ನಾಯಕತ್ವದ ಬಗ್ಗೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು. ಅದರಿಂದಾಗಿ ಅವರು ಸಿಡ್ನಿ ಟೆಸ್ಟ್‌ನಲ್ಲಿ ಕಣಕ್ಕಿಳಿಯದೆ ಜಸ್‌ಪ್ರೀತ್ ಬೂಮ್ರಾ ಅವರಿಗೆ ನಾಯಕತ್ವದ ಹೊಣೆ ವಹಿಸಿದ್ದರು. ವಿರಾಟ್ ಅವರು ಆಫ್‌ಸ್ಟಂಪ್ ಹೊರಗೆ ಸಾಗುವ ಎಸೆತಗಳನ್ನು ಕೆಣಕಿ ಪದೇಪದೇ ವಿಕೆಟ್ ಚೆಲ್ಲಿದ್ದರು. ಅದಕ್ಕಾಗಿ ಅಪಾರ ಟೀಕೆಗಳಿಗೆ ಗುರಿಯಾಗಿದ್ದರು.ಆಸ್ಟ್ರೇಲಿಯಾ ಪ್ರವಾಸಕ್ಕೂ ಮುನ್ನ ಭಾರತದಲ್ಲಿ ನಡೆದಿದ್ದ ನ್ಯೂಜಿಲೆಂಡ್ ಎದುರಿನ ಸರಣಿಯಲ್ಲಿಯೂ ತಂಡವು ಹೀನಾಯವಾಗಿ ಸೋಲು ಅನುಭವಿಸಿತ್ತು.

ಈ ಸರಣಿಗಳ ಸಂದರ್ಭದಲ್ಲಿ ಡ್ರೆಸಿಂಗ್ ರೂಮ್ ಒಳಗೆ ನಡೆದಿದ್ದವೆನ್ನಲಾದ ಕೆಲವು ವಿಷಯಗಳು ಚರ್ಚೆಗೆ ಗ್ರಾಸವಾಗಿದ್ದವು. ಅಲ್ಲದೆ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ಕೆಲವು ಆಟಗಾರರ ನಡುವೆ ಭಿನ್ನಾಭಿಪ್ರಾಯಗಳಿವೆ ಎಂಬ ಮಾತುಗಳೂ ಕೇಳಿಬಂದಿದ್ದವು. 'ತಂಡದೊಳಗೆ ಸೂಪರ್‌ಸ್ಟಾರ್ ಸಂಸ್ಕೃತಿ ಇದೆ. ಈ ತಾರೆಗಳು ವೈಫಲ್ಯ ಅನುಭವಿಸಿದರೂ ಆಯ್ಕೆಗೆ ಪರಿಗಣಿಸಲಾಗುತ್ತದೆ. ಈ ರೀತಿಯ ಸಂಸ್ಕೃತಿ ಇರಬಾರದು' ಎಂದು ಕೆಲವು ವೀಕ್ಷಕ ವಿವರಣೆಗಾರರೂ ಟೀಕಿಸಿದ್ದರು.

ಅದರ ನಂತರ ರೋಹಿತ್ ನಾಯಕತ್ವದಲ್ಲಿ ಭಾರತ ತಂಡವು ಚಾಂಪಿಯನ್ಸ್ ಟ್ರೋಫಿ (ಏಕದಿನ ಮಾದರಿ) ಜಯಿಸಿತು. ಆ ಸಡಗರದಲ್ಲಿ ಟೆಸ್ಟ್ ಸರಣಿ ಸೋಲಿನ ಕಹಿನೆನಪು ಮರೆಯಾಯಿತು. ಆದರೆ ಜನ ಮರೆತರೂ ವಿರಾಟ್ ಮತ್ತು ರೋಹಿತ್ ಸರಿಯಾದ ಸಮಯಕ್ಕೆ ಕಾದಿದ್ದರು. ಈಗ ಡಬ್ಲ್ಯುಟಿಸಿ(ವಿಶ್ವಟೆಸ್ಟ್‌ಚಾಂಪಿಯನ್‌ಷಿಪ್) ನಾಲ್ಕನೇ ಆವೃತ್ತಿ ಶುರುವಾಗುವ ಹೊತ್ತಿನಲ್ಲಿ ಟೆಸ್ಟ್‌ಗೆ ಗುಡ್‌ಬೈ ಹೇಳಿದ್ದಾರೆ. ಹಾಗಾಗಿಯೇ ಪ್ರೇಕ್ಷಕರವಲಯದಿಂದ ಮಿಶ್ರಪ್ರತಿಕ್ರಿಯೆಗಳು ಕೇಳಿಬರುತ್ತಿವೆ. ವಿರಾಟ್ ದೈಹಿಕವಾಗಿ ಮತ್ತು ಮಾನಸಿಕವಾಗಿ ಫಿಟ್ ಆಗಿರುವುದರಿಂದ ಇನ್ನೂ ಕೆಲಕಾಲ ಆಡಬಹುದಿತ್ತು ಎಂಬ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ.

ಇದೆಲ್ಲದರಾಚೆ ಆಧುನಿಕ ಕ್ರಿಕೆಟ್ ಜಗತ್ತಿನ ಈ ದಿಗ್ಗಜರು ಅದ್ಭುತವಾದ ಕೊಡುಗೆಯನ್ನು ನೀಡಿ ಹೋಗಿದ್ದಾರೆ. ಅದರಿಂದಾಗಿಯೇ ಭಾರತ ತಂಡದಲ್ಲಿ ದೊಡ್ಡ ನಿರ್ವಾತ ಸೃಷ್ಟಿಯಾಗಿರುವುದೂ ಸತ್ಯ. ಈ ಪರಿಸ್ಥಿತಿಯನ್ನು ಯುವ ಆಟಗಾರರು ಸಕಾರಾತ್ಮಕವಾಗಿ ಪರಿಗಣಿಸಿದರೆ ಅವರ ಸ್ಥಾನಗಳನ್ನು ತುಂಬುವ ಅವಕಾಶ ಇದೆ. ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ರಿಷಭ್ ಪಂತ್, ದೇವದತ್ತ ಪಡಿಕ್ಕಲ್ ಅವರಂತಹ ಪ್ರತಿಭಾವಂತರಿಗೆ ಸಾಧನೆ ಮಾಡುವ ಸಾಮರ್ಥ್ಯ ಇದೆ. ತಾವೂ ಕ್ರಿಕೆಟ್ ಆಗಸದ ನಕ್ಷತ್ರಗಳಾಗಿ ಹೊಳೆಯುವ ಈ ಸುವರ್ಣಾವಕಾಶವನ್ನು ಅವರು ಎರಡೂ ಕೈಗಳಿಂದ ಬಾಚಿಕೊಳ್ಳಬೇಕು. ಮುಖ್ಯವಾಗಿ ಭಾರತಕ್ಕೆ ವಿಶ್ವ ಟೆಸ್ಟ್ ಕಿರೀಟವನ್ನು ಗೆದ್ದು ತರುವ ಹೊಣೆಗಾರಿಕೆಯೂ ಯುವ ಆಟಗಾರರ ಮುಂದಿದೆ. ವಿರಾಟ್ ಮತ್ತು ರೋಹಿತ್ ನಾಯಕತ್ವದಲ್ಲಿ ಭಾರತವು ಡಬ್ಲ್ಯುಟಿಸಿ ಫೈನಲ್‌ನಲ್ಲಿ ತಲಾ ಒಂದು ಬಾರಿ ರನ್ನರ್ ಅಪ್ ಆಗಿತ್ತು.

ಕರ್ನಲ್‌ಸಿ.ಕೆ.ನಾಯ್ಡುಅವರಿಂದಶುರುವಾಗಿ ರೋಹಿತ್ ಶರ್ಮಾ ಅವರವರೆಗೂ ಹಲವು ಆಟಗಾರರು ಟೆಸ್ಟ್ ಮಾದರಿಯ ಉಳಿವಿಗೆ ಅಮೋಘ ಕಾಣಿಕೆ ನೀಡಿದ್ದಾರೆ. ಅದರಲ್ಲೂ ಟಿ20 ಕ್ರಿಕೆಟ್ ಅಬ್ಬರದಲ್ಲಿ ಟೆಸ್ಟ್ ಪಂದ್ಯಗಳನ್ನೂ ಜನ ನೋಡುವಂತೆ ಮಾಡಿದ ಬಹುಪಾಲು ಶ್ರೇಯ ವಿರಾಟ್ ಮತ್ತು ರೋಹಿತ್ ಅವರಿಗೇ ಸಲ್ಲಬೇಕು. ನವಪೀಳಿಗೆಯ ಪ್ರೇಕ್ಷಕರಿಗೆ ರುಚಿಸುವಂತಹ ಆಟವನ್ನು ಬಿಳಿ ದಿರಿಸಿನಲ್ಲಿಯೂ ಉಣಬಡಿಸಿದವರು ವಿರಾಟ್ ಮತ್ತು ರೋಹಿತ್. ಆಸ್ಟ್ರೇಲಿಯಾದ ನೆಲದಲ್ಲಿ ಮೊದಲ ಬಾರಿ ಬಾರ್ಡರ್?ಗಾವಸ್ಕರ್ ಟ್ರೋಫಿ ಜಯಿಸಲು ಸಾಧ್ಯವಾಗಿದ್ದೇ ವಿರಾಟ್ ನಾಯಕತ್ವದಲ್ಲಿ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಮತ್ತು ಟಿ20 ಪಂದ್ಯಗಳು ಮನರಂಜನೆಯ ಮೂಲಗಳು ಎಂಬುದು ನಿಜ. ಅವು ಕ್ರಿಕೆಟ್ ಮಂಡಳಿಗೆ ದೊಡ್ಡ ಪ್ರಮಾಣದ ವರಮಾನ ಗಳಿಸಿಕೊಡುತ್ತವೆ ಎಂಬುದೂ ದಿಟ. ಆದರೆ ಕ್ರಿಕೆಟ್‌ನ ತಾಯಿಬೇರು ಟೆಸ್ಟ್ ಮಾದರಿಯ ಸೊಬಗಿಗೆ ಸರಿಸಾಟಿ ಮತ್ತೊಂದಿಲ್ಲ. ಇದನ್ನು ಕ್ರಿಕೆಟ್ ಕಸ್ಟೋಡಿಯನ್ ಮೆರಿಲ್‌ಬೋನ್ ಕ್ರಿಕೆಟ್ ಕ್ಲಬ್ (ಎಂಸಿಸಿ) ಕೂಡ ಪ್ರತಿಪಾದಿಸುತ್ತದೆ.

'ಟೆಸ್ಟ್ ಕ್ರಿಕೆಟ್ ನನ್ನ ಹೃದಯಕ್ಕೆ ಹತ್ತಿರವಾದದ್ದು. ಅದು ನೀಡಿರುವ ನೆನಪುಗಳು ನನ್ನ ಪಾಲಿಗೆ ಶಾಶ್ವತ. ಈ ಮಾದರಿಯು ನನ್ನ ಸಾಮರ್ಥ್ಯವನ್ನು ಪ್ರತಿ ಹಂತದಲ್ಲಿಯೂ ಪರೀಕ್ಷೆಗೊಡ್ಡಿದೆ. ತಿದ್ದಿ, ತೀಡಿ ರೂಪಿಸಿದೆ' ಎಂದು ಸ್ವತಃ ವಿರಾಟ್ ತಮ್ಮ ವಿದಾಯಪತ್ರದಲ್ಲಿ ಬರೆದಿದ್ದಾರೆ.

ವೈಟ್‌ಬಾಲ್ ಕ್ರಿಕೆಟ್‌ನ ಪರಿಣತರಲ್ಲಿ ಅಗ್ರಮಾನ್ಯರಾಗಿರುವ ರೋಹಿತ್ ಕೂಡ ಟೆಸ್ಟ್ ಆಟಗಾರರಾಗಿ ಗುರುತಿಸಿಕೊಳ್ಳಲು ತಮ್ಮನ್ನು ಅಗ್ನಿದಿವ್ಯಕ್ಕೆ ಒಡ್ಡಿಕೊಂಡವರು. ಏಕದಿನ ಮಾದರಿಯಲ್ಲಿ ಮೂರು ದ್ವಿಶತಕ ಹೊಡೆದ ಆಟಗಾರ ರೋಹಿತ್ ಅವರು ಟಿ20 ಮತ್ತು ಐಪಿಎಲ್‌ನಲ್ಲಿಯೂ ಚಾರಿತ್ರಿಕ ಸಾಧನೆ ಮಾಡಿದ್ದಾರೆ. ಆದರೆ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಪಂದ್ಯದಲ್ಲಿಯೇ ಬಾರಿಸಿದ ಶತಕವನ್ನು ಕ್ರಿಕೆಟ್‌ಪ್ರೇಮಿಗಳು ಮರೆಯಲಾಗದು.

2013ರಲ್ಲಿ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆದ ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಪಂದ್ಯದಲ್ಲಿ ರೋಹಿತ್ ಮತ್ತು ಅಶ್ವಿನ್ ಇಬ್ಬರೂ ಶತಕ ಬಾರಿಸಿದ್ದರು. ಇದಷ್ಟೇ ಅಲ್ಲ, 67 ಟೆಸ್ಟ್‌ಗಳಲ್ಲಿ ಅವರು ಹೊಡೆದ ಒಟ್ಟು 12 ಶತಕಗಳಿಗೂ ಒಂದೊಂದು ವೈಶಿಷ್ಟ್ಯವಿದೆ. ಅವೆಲ್ಲವೂ ರೋಹಿತ್ ಅವರು ತಾವು ಟೆಸ್ಟ್‌ಗೂ ಸೈ ಎಂಬುದನ್ನು ಸಾಬೀತುಪಡಿಸಿದ ದಾಖಲೆಗಳಾಗಿವೆ. ಐದು ಮತ್ತು ಆರನೇ ಕ್ರಮಾಂಕಗಳಲ್ಲಿ ಬ್ಯಾಟಿಂಗ್ ಮಾಡುವುದರೊಂದಿಗೆ ಟೆಸ್ಟ್ ಕ್ರಿಕೆಟ್ ಜೀವನ ಆರಂಭಿಸಿದ್ದ ಅವರು, ನಂತರದಲ್ಲಿ ಆರಂಭಿಕ ಬ್ಯಾಟರ್ ಆಗಿ ಬಡ್ತಿ ಪಡೆದು ಯಶಸ್ವಿಯಾದರು.

ವಿರಾಟ್ ಟೆಸ್ಟ್‌ನಲ್ಲಿ ಸಚಿನ್ ನಂತರದ ಸ್ಥಾನ ತುಂಬಿದವರು. ಹೆಚ್ಚಾಗಿ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದರು. ಅಗ್ರಕ್ರಮಾಂಕದ ಮೂವರು ಬ್ಯಾಟರ್‌ಗಳು ಉತ್ತಮವಾಗಿ ಆಡಿದಾಗ ದೊಡ್ಡ ಮೊತ್ತದತ್ತ ತಂಡವನ್ನು ನಡೆಸುವ ಹೊಣೆ ಈ ಕ್ರಮಾಂಕದ ಬ್ಯಾಟರ್‌ಗಿರುತ್ತದೆ. ಒಂದೊಮ್ಮೆ ಅಗ್ರಕ್ರಮಾಂಕದವರು ಬೇಗನೆ ಔಟಾದಾಗ ಮುಳುಗುವ ಇನಿಂಗ್ಸ್ ರಕ್ಷಿಸುವ ಹೊಣೆ ಕೂಡ ಈ ಬ್ಯಾಟರ್‌ಗಿರುತ್ತದೆ. ಅದಕ್ಕೆ ದೈಹಿಕ ಕ್ಷಮತೆಯ ಜೊತೆಗೆ ಗಟ್ಟಿ ಮನೋಭೂಮಿಕೆಯೂ ಇರಬೇಕು. ಈ ಗುಣಗಳು ಕೊಹ್ಲಿ ಅವರಲ್ಲಿ ಮೇಳೈಸಿದ್ದವು. ಎಲ್ಲಕ್ಕಿಂತ ಮುಖ್ಯವಾಗಿ ಭಾರತದ ಕ್ರಿಕೆಟ್‌ನಲ್ಲಿ ಒಬ್ಬ ತಾರೆಯ ನಿರ್ಗಮನದ ಹೊತ್ತಿನಲ್ಲಿ ಮತ್ತೊಬ್ಬ ಪ್ರತಿಭಾನ್ವಿತನ ಆಗಮನದ ಉದಾಹರಣೆಗಳಿವೆ.

ಸುನಿಲ್ ಗಾವಸ್ಕರ್ ಸ್ಥಾನಕ್ಕೆ ಸಚಿನ್, ನಂತರ ಕೊಹ್ಲಿ, ರಾಹುಲ್ ದ್ರಾವಿಡ್ ನಂತರ ಚೇತೇಶ್ವರ ಪೂಜಾರ, ವೀರೇಂದ್ರ ಸೆಹ್ವಾಗ್ ಅವರಿಗೆ ರೋಹಿತ್, ಕಪಿಲ್ ದೇವ್ ಜಾಗಕ್ಕೆ ಜಾವಗಲ್ ಶ್ರೀನಾಥ್ ಹಾಗೂ ಹರಭಜನ್ ಸಿಂಗ್ ಅವರ ಸ್ಥಾನಕ್ಕೆ ಅಶ್ವಿನ್ ಸಿಕ್ಕರು. ಈಗ ಐಪಿಎಲ್‌ನಿಂದಾಗಿ ಯುವಪ್ರತಿಭೆಗಳು ಕಣದಲ್ಲಿದ್ದಾರೆ. ಆದರೆ ರೋಹಿತ್, ಕೊಹ್ಲಿ, ಅಶ್ವಿನ್ ಸ್ಥಾನ ತುಂಬುವವರು ಈ ಗುಂಪಿನಲ್ಲಿ ಇದ್ದಾರೆಯೇ ಎಂಬುದು ಪ್ರಶ್ನೆಯಾಗಿದೆ.

**– ಕೃಪೆ : ಪ್ರ.ವಾ.**

# ದೇವರನ್ನು ಅರಿಯಬೇಕು

ದೇಹದೊಳಗೆ ಎಷ್ಟೊಂದು ವಾಯುಗಳಿವೆ; ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಮುಂತಾದ ವಾಯುಗಳಿವೆ. ಒಂದೊಂದು ವಾಯುವೂ ಒಂದೊಂದು ಕೆಲಸ ಮಾಡುತ್ತದೆ. ಇದನ್ನು ನಡೆಸಿದ್ದು ಯಾರು ಎನ್ನುವುದನ್ನು ವಿಚಾರ ಮಾಡಬೇಕಲ್ಲ ಮನುಷ್ಯ. ನನ್ನ ದೇಹವನ್ನು ನಡೆಸಿದ ಶಕ್ತಿ ಐತಲ್ಲ, ಅದು ದೇವರು. ಅಂತಹ ದೇವನನ್ನು ಮನುಷ್ಯ ಅರಿಯಬೇಕು, ಅನುಭವಿಸಬೇಕು, ಆರಾಧಿಸಬೇಕು. ದೇವನನ್ನು ಅರಿಯುವುದು ಹೇಗೆ? ದೇವರನ್ನು ಅರಸಲು ಸಾಧ್ಯವಿಲ್ಲ. ಅರಿಯಬೇಕು, ಅನುಭವಿಸಬೇಕು.

ದೇವರನ್ನು ಅರಸಲು ಆತನೇನು ಕಾಡುಮೇಡುಗಳಲ್ಲಿ ಹುದುಗಿಕೊಂಡಿದ್ದಾನೇನು? ದೇವನನ್ನು ಅರಿಯಬೇಕು ಎಂದು ಎಲ್ಲರಿಗೂ ಬಯಕೆ ಇದೆ. ಈಗೊಂದು ಮೈಕ್ ಇದೆ, ಟೇಬಲ್ ಇದೆ. ಅವು ಇವೆ ಎಂದು ಹೇಳುತ್ತೇವೆ, ಅವು ಕಾಣುತ್ತವೆ. ದೇವರು ಹೀಗೆ ನಮ್ಮ ಕಣ್ಣಿಗೆ ಕಂಡಾನೇನು? ದೃಶ್ಯ ನಿರಕ್ಷರ ದೇವರು. ನಿರಾಕಾರ ದೇವರು. ಆ ನಿರಾಕಾರ ದೇವನಿಗೆ ನಮ್ಮ ಋಷಿಗಳು ಸತ್ ಎಂದು ಕರೆದರು. ಸತ್ ಎನ್ನುವುದರ ಅರ್ಥ ಯಾವಾಗಲೂ ಇರುವಂತಹದ್ದು ಎಂದು. ಮೂರೂ ಕಾಲದಲ್ಲಿ ಇರುವಂತಹದ್ದು.

ಈಗ ಒಂದು ಹೂವು ಇದೆ. ಅದು ನಿನ್ನೆ ಇರಲಿಲ್ಲ. ಇಂದು ಇದೆ. ನಾಳೆ ಇರುವುದಿಲ್ಲ. ಅಂದರೆ ಒಂದು ಹೂವಿನ ಇರುವಿಕೆ ಎರಡು ಇಲ್ಲಗಳ ನಡುವಿನ ಇರುವಿಕೆ. ಅಂದರೆ ಹೂವು ಸತ್ ಅಲ್ಲ. ಅದು ಮಿಥ್ಯೆ. ಆದರೆ ದೇವ ಹಾಗಲ್ಲ. ನಿನ್ನೆಯೂ ಇದ್ದ. ಇಂದೂ ಇದ್ದಾನೆ. ನಾಳೆಯೂ ಇರ್ತಾನೆ. ಯಾವಾಗಲೂ ಯಾವುದು ಇರುತ್ತದಲ್ಲ ಅದಕ್ಕೆ ಸತ್ ಅಂತ ಕರೀತಾರೆ. ಹಾಗಾದರೆ ನೀವು ಕಲ್ಲು, ಮಣ್ಣು, ಕಾಲ, ನೀರು, ಆಕಾಶ ಎಲ್ಲವೂ ಎಲ್ಲ ಕಾಲಕ್ಕೂ ಇರುತ್ತವೆ. ಇವಕ್ಕೂ ದೇವರು ಅನ್ನಬೇಕಲ್ಲ ಅಂತ ಕೇಳಿದರೆ ಅವು ಜಡ ವಸ್ತುಗಳು. ಅವಕ್ಕೆ ತನ್ನ ಜ್ಞಾನವೂ ಇಲ್ಲ, ಇನ್ನೊಬ್ಬರ ಜ್ಞಾನವೂ ಇಲ್ಲ. ದೇವರು ಬರೇ ಸತ್ ಅಲ್ಲ; ಚಿತ್ ಕೂಡಾ ಹೌದು. ಚಿತ್ ಇದರ ಅರ್ಥ ಬೆಳಗುವಿಕೆ. ಬೆಳಗುವಿಕೆ ದೇವರಾದರೆ ಸೂರ್ಯ ಕೂಡಾ ಬೆಳಗುತ್ತಾನೆ ಎಂದು ನೀವು ಕೇಳಬಹುದು.

ನಿಮ್ಮ ಮನೆಯಲ್ಲಿ ಸೋಲಾರ್ ದೀಪ ಬೆಳಗುತ್ತದೆ. ದೀಪಕ್ಕೆ ಶಕ್ತಿ ಎಲ್ಲಿಂದ ಬಂತು ಎಂದು ಕೇಳಿದರೆ ಸೋಲಾರ್ ಪ್ಯಾನಲ್‌ನಿಂದ ಬಂತು. ಸೋಲಾರ್ ಪ್ಯಾನಲ್‌ಗೆ ಶಕ್ತಿ ಎಲ್ಲಿಂದ ಬಂತು ಅಂದರೆ, ಸೂರ್ಯನಿಂದ ಬಂತು. ಸೂರ್ಯನಿಗೆ ಶಕ್ತಿ ಎಲ್ಲಿಂದ ಬಂತು ಅಂದರೆ, ದೇವರಿಂದ ಬಂತು. ಸೂರ್ಯ, ಚಂದ್ರ, ನಕ್ಷತ್ರಗಳಲ್ಲಿ ಬೆಳಕು ತುಂಬಿಟ್ಟಿದ್ದಾನಲ್ಲ, ಅವನು ದೇವರು. ಯಾವುದು ಪ್ರಕಾಶಗೊಳಿಸುತ್ತದೆ ಅದು ದೇವರು.

ಈ ಜಗತ್ತಿಗೆ ಚಿತ್ ವಿಲಾಸ ಎಂದು ಕರೆಯುತ್ತಾರೆ. ಅಂದರೆ ದೇವರ ವಿಲಾಸ. ಚಿತ್ ಪ್ರಕಾಶ ಅಂತ ಕರೀತಾರೆ. ಯಾಕೆಂದರೆ, ಇದು ದೇವನ ಬೆಳಕು ಅಂತ. ಇನ್ನೊಂದು ಚಿತ್ ಶಕ್ತಿ ಅಂತ ಇದೆ. ಜಗತ್ತಿನಲ್ಲಿ ವಸ್ತುಗಳಿಲ್ಲ. ಇಲ್ಲಿರುವುದು ಬರೀ ಶಕ್ತಿ ಅಂತ ವಿಜ್ಞಾನಿಗಳು ಹೇಳುತ್ತಾರೆ. ಚಿತ್ ಶಕ್ತಿ ಎಂದರೆ ಇರುವುದೆಲ್ಲವೂ ದೇವನ ಶಕ್ತಿ ಎಂದು ಅರ್ಥ. ಈ ದೇಹ, ಈ ಭೂಮಿ, ಈ ಬದುಕು ಎಲ್ಲವೂ ದೇವನು ಕೊಟ್ಟಿದ್ದು ಎಂದು ಹೃದಯದಲ್ಲಿ ಇಟ್ಟುಕೊಂಡು ದೇವಭಾವದಿಂದ ಬದುಕಬೇಕು ಮನುಷ್ಯ.

# ಎದೆಯೊಳಗೆ ದೇವನ ಬೆಳಕು ಇರಬೇಕು

ಮನಸ್ಸಿನಲ್ಲಿ ದೇವರ ಭಾವ ಇರಬೇಕು. ಎಲ್ಲವೂ ನಿನ್ನದು ಎನ್ನುವ ಭಾವ ಬರಬೇಕು. 'ಅಲ್ರೀ ಎಲ್ಲದೂ ದೇವರದ್ದು ಅಂದ್ರ ನಮ್ಮದು ಅನ್ನುವುದು ಯಾವಾಗ' ಅಂತ ನೀವು ಕೇಳಬಹುದು. ನೀವು ಎಲ್ಲವೂ ನಿಮ್ಮದು ಎಂದು ಹೇಳಿ ನೋಡಿ. ಬೆಳಿಗ್ಗೆ ಎದ್ದಾಗ ದೇವರಿಗೆ ಕೈ ಮುಗಿದು ಇದು ಎಲ್ಲ ನಿನ್ನದು ಎನ್ನಬೇಕು. ಸ್ನೇಹಿತರು ಸಿಕ್ಕಾಗ ನಂದೇನೂ ಇಲ್ಲ, ಎಲ್ಲ ನಿಮ್ಮದು ಅನ್ನಬೇಕು. ಮನೆಯಲ್ಲಿ ಮಕ್ಕಳಿಗೆ ಎಲ್ಲ ನಿಮ್ಮದು ಅನ್ನಬೇಕು. ಹೆಣ್ಣುಮಕ್ಕಳಿಗೂ ಹಾಗೆಯೇ ಹೇಳಬೇಕು. ಎಲ್ಲರಿಗೂ ನಿನ್ನದು, ನಿನ್ನದು ಎಂದು ಹೇಳಿದರೆ ನನ್ನದು ಎನ್ನುವುದು ಯಾವಾಗ? ಎಲ್ಲ ಮುಗಿದ ನಂತರ ಕೋಣೆಯ ಹಾಸಿಗೆಯಲ್ಲಿ ಮಲಗಿ ಚಾದರ ಹೊದ್ದುಕೊಂಡು ಇದೆಲ್ಲ ನಂದು ಅಂತ ಹೇಳಿ ಗಪ್ಪಾಗಿ ಮಲಗಿಕೊಳ್ಳಬೇಕು. ಆಗ ಎಲ್ಲ ಅರಾಂ ಇರುತ್ತದೆ.

ತಾಯಿಯ ಗರ್ಭದಿಂದ ಮಗು ಭೂಮಿಗೆ ಬಂತಲ್ಲ. ಆಗ ಮಗುವಿನ ಮನಸ್ಸು ಸ್ವಚ್ಛ ಪಾಟಿ ಇದ್ದ ಹಾಗೆ ಇತ್ತು. ಆ ಸ್ವಚ್ಛ ಪಾಟಿಯ ಮೇಲೆ ಮಗು ಅ ಎಂದು ಬರೀತು, ಆ ಅಂತ ಬರೀತು, ಔ ಅಂತ ಬರೀತು, ಅಪ್ಪ ಅಂತ ಬರೀತು. ಅಣ್ಣ, ತಮ್ಮ, ಗಂಡ, ಹೆಂಡತಿ, ಮನೆ, ಮಗ ಅಂತ ಬರೀತು. ಕೊನೆಗೆ ನಂದು ಎಂದು ಬರೀತು. ಅಲ್ಲೇ ದುಃಖ ಶುರುವಾಯಿತು ಮನುಷ್ಯನಿಗೆ. ಯಾವಾಗ ಮನುಷ್ಯನಲ್ಲಿ ನಂದು ಎನ್ನುವ ಭಾವ ಬಂತು, ಯುದ್ಧ ಶುರು. ಮಹಾಭಾರತದ ಯುದ್ಧ ಆಗಿದ್ದೂ ನಂದು ನಿಂದು ಬ್ಯಾರೆ ಎಂದಿದ್ದಕ್ಕೇ. ಮನೆಯಲ್ಲಿ ಅಣ್ಣತಮ್ಮಂದಿರಿಗೆ ಜಗಳ ಶುರುವಾಗಿದ್ದೂ ಇದು ನಂದು ಇದು ನಿಂದು ಎಂಬ ಕಾರಣಕ್ಕಾಗಿಯೇ. ಒಂದು ಮಾತು ನೆನಪಿನಲ್ಲಿ ಇಟ್ಟುಕೊಳ್ಳಬೇಕು ಮನುಷ್ಯ. ಪೇಪರ್‌ನಲ್ಲಿ ನಮ್ಮ ಹೆಸರು ಇರಬೇಕು. ಆದರೆ ಮನಸ್ಸಿನಲ್ಲಿ ಭಗವಂತನ ಉಸಿರಿರಬೇಕು. ಇದನ್ನು ಕಲಿಯಬೇಕು ಮನುಷ್ಯ. ಹೊಲ ಇರಬೇಕು, ಮನೆ ಇರಬೇಕು, ಸಂಸಾರ ಇರಬೇಕು, ಹೊರಗೆ ವ್ಯವಹಾರದ ಬಳಕೆ ಇರಬೇಕು, ಎದೆಯೊಳಗೆ ದೇವನ ಬೆಳಕು ಇರಬೇಕು. ಅವ ಸತ್ಸಂಗಿ. ಅವ ಅಧ್ಯಾತ್ಮಿ. ಇಲ್ಲಿ ನನ್ನದು ಎನ್ನುವುದು ಯಾವುದು ಇಲ್ಲ. ಯಾವುದೂ ನಮ್ಮ ಜೊತೆ ಬರುವುದಿಲ್ಲ. ನಾವು ಎಷ್ಟೇ ಕಷ್ಟಪಟ್ಟು ಗಳಿಸಿದರೂ ಒಂದು ದಿನ ಎಲ್ಲ ಬಿಟ್ಟು ಹೋಗಲೇಬೇಕು. ಯಾರು ಮಾಡಿದ್ದೂ ಉಳಿಯುವುದಿಲ್ಲ.

ಶಿಲಾಶಾಸನಗಳೇ ಹೋಗಿದ್ದಾವೆ. ಶಿಲಾನ್ಯಾಸಗಳೂ ಉಳಿಯುವುದಿಲ್ಲ. ಸುಮ್ಮನೆ ನಮಗೆ ಭ್ರಮೆ ಇರುತ್ತದೆ. ಡಾಲರ್ ಕೊಡ್ತೀವಿ ಸ್ವರ್ಗಕ್ಕೆ ಕರೆದುಕೊಂಡು ಹೋಗಿ ಅಂದ್ರೆ ನಡೆಯುವುದಿಲ್ಲ. ಪೌಂಡ್ ಕೊಡ್ತೀನಿ ಅಂದರೂ ನಡೆಯುವುದಿಲ್ಲ. ಈ ದೇಹವನ್ನು ಬಿಟ್ಟು ಹೋಗುವಾಗ ನಮ್ಮ ಜೊತೆಗೆ ಬರುವುದು ನಮ್ಮ ಪುಣ್ಯದ ನಾಣ್ಯ ಮಾತ್ರ. ಹಿಮಾಲಯವನ್ನು ನಿರ್ಮಿಸಿದವರು ಯಾರು? ಸಾಗರದಲ್ಲಿ ನೀರು ತುಂಬಿದವರು ಯಾರು? ಬೆಟ್ಟಗುಡ್ಡಗಳನ್ನು ಕಟ್ಟಿದವರು ಯಾರು? ಸೂರ್ಯ ಚಂದ್ರರಂತಹ ಆರದ ದೀಪ ಹಚ್ಚಿಟ್ಟಿದ್ದಾನಲ್ಲ ಅವನದ್ದು ನಿತ್ಯ ಕಾರ್ತಿಕೋತ್ಸವ.

# ಎಲ್ಲ ದಾನಗಳಲ್ಲಿ ರಕ್ತದಾನ ಶ್ರೇಷ್ಠ



**ಜಮಖಂಡಿ :** ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಸ್ನಾತಕೋತ್ತರ ಕೇಂದ್ರದಲ್ಲಿ ಜಮಖಂಡಿಯಲ್ಲಿ ಏಪ್ರಿಲ್ 9 ರಂದು ರೆಡ್ಕ್ರಾಸ್ಘಟಕ, ಎನ್.ಎಸ್.ಎಸ್. ಘಟಕ, ಐ.ಕ್ಯೂ.ಎ.ಸಿ. ಹಾಗೂ ಬಾಗಲಕೋಟ ಜಿಲ್ಲಾ, ಜಮಖಂಡಿ ತಾಲ್ಲೂಕಾ ಸಾರ್ವಜನಿಕ ಆಸ್ಪತ್ರೆ ಇವರ ಸಂಯುಕ್ತ ಆಶ್ರಯದಲ್ಲಿ 'ರಕ್ತದಾನ ಶಿಬಿರ'ವನ್ನು ಹಮ್ಮಿಕೊಳ್ಳಲಾಗಿತ್ತು.

ಸ್ವಯಂ ಪ್ರೇರಿತ ಶಿಬಿರವನ್ನು ಡಾ. ಪಾಂಡುರಂಗ ದೊಡಮನಿ, ವೈದ್ಯಾಧಿಕಾರಿಗಳು, ರಕ್ತ ಕೇಂದ್ರ, ಜಿಲ್ಲಾ ಶಸ್ತ್ರ ಚಿಕಿತ್ಸಕರ ಕಾರ್ಯಾಲಯ, ಜಿಲ್ಲಾ ಆಸ್ಪತ್ರೆ, ಬಾಗಲಕೋಟ ಇವರು ಸಸಿಗೆ ನೀರೆರೆಯುವುದರ ಮೂಲಕ ಉದ್ಘಾಟಿಸಿದ ಅವರು ಮಾತನಾಡುತ್ತಾ, ರಕ್ತದಾನದ ಮಹತ್ವವನ್ನು ತಿಳಿಸುತ್ತಾ, ರಕ್ತದಾನ ಮಾಡುವುದರಿಂದ ನಮ್ಮ ಶರೀರಕ್ಕೆ ಅನೇಕ ತೆರನಾದ ಲಾಭವಿದೆ ಹಾಗೂ ರಕ್ತದಾನವನ್ನು ಇನ್ನೊಬ್ಬರ ಜೀವ ಉಳಿಸುವುದಕ್ಕಾಗಿ ಮಾಡಬೇಕು.

ಸರಕಾರದ ರಕ್ತ ಭಂಡಾರಕ್ಕೆ ರಕ್ತದಾನ ಮಾಡುವುದರಿಂದ ಅದು ಬಡವರಿಗೆ ನೇರವಾಗಿ ತಲುಪುತ್ತದೆ. 18 ರಿಂದ 60 ವರ್ಷದ ವಯೋಮಿತಿಯವರು ರಕ್ತದಾನವನ್ನು ಮಾಡಬಹುದು. ರಕ್ತದಾನ ಮಾಡಲು ಕನಿಷ್ಟ ತೂಕ 45 ಕೆ.ಜಿ ದಿಂದ 50 ಕೆ.ಜಿ. ಇರಬೇಕು. ರಕ್ತ ದಾನವನ್ನು ವರ್ಷಕ್ಕೆ ಎರಡು ಬಾರಿಯಾದರೂ ಮಾಡಬೇಕು. ಮುನ್ನೂರು ಎಮ್.ಎಲ್. ರಕ್ತದಾನ ಮಾಡುವುದರಿಂದ ನಾಲ್ಕು ಜನ ರೋಗಿಗಳ ಜೀವ ಉಳಿಸಿದಂತೆ.

ರಕ್ತ ದಾನವನ್ನು ಹೃದಯ ಖಾಯಿಲೆ ಉಳ್ಳವರು, ಮೂರ್ಛೆ ರೋಗ ಇರುವವರು ಹಾಗೂ ರಕ್ತದಾನ ಮಾಡಿದ ಮೂರು ತಿಂಗಳ ಒಳಗಾಗಿ ಮತ್ತೆ ರಕ್ತದಾನ ಮಾಡಬಾರದು. ಅದರಂತೆ ಬಿಪಿ, ಶುಗರ್ ಕಂಟ್ರೋಲ್ನಲ್ಲಿ ಇದ್ದವರು ಕೂಡ ರಕ್ತದಾನ ಮಾಡಬಹುದು. ಕೊಲೆಸ್ಟ್ರಾಲ್ ಇದ್ದವರು ರಕ್ತದಾನ ಮಾಡುವುದರಿಂದ ನೇರವಾಗಿ ಕೊಬ್ಬನ್ನು ಕರಗಿಸಬಹುದು. ಹೀಗಾಗಿ ಕನಿಷ್ಟ ಪಕ್ಷ ವರ್ಷದಲ್ಲಿ ಒಂದು ಸಲವಾದರೂ ರಕ್ತದಾನವನ್ನು ಮಾಡಬೇಕು ಎಂದು ಹೇಳಿದರು.

ಡಾ. ಗೌತಮಿ ಅವರು ಕೂಡ ರಕ್ತದಾನದ ಮಹತ್ವದ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯೆ ಡಾ. ಸುನಂದಾ ಎಸ್. ಶಿರೂರ ಅವರು ಮಾತನಾಡುತ್ತಾ, ಎಲ್ಲ ದಾನಗಳಲ್ಲಿ ಶ್ರೇಷ್ಠ ದಾನ ರಕ್ತದಾನ. ಸ್ವಯಂ ಪ್ರೇರಿತ ರಕ್ತದಾನ ಮಾಡುವುದರಿಂದ ಜೀವನ ಶೈಲಿಯಲ್ಲಿ ಹೊಸ ರಕ್ತ ಉತ್ಪಾದನೆಯಾಗಿ ಹೊಸ ಚೇತನ ಉಂಟಾಗುತ್ತದೆ. ಕೊಟ್ಟದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಕೊಟ್ಟದ್ದು ಕೆಟ್ಟತ್ತೆನಬೇಡ ಅದು ಮುಂದೆ ಕಟ್ಟಿಹುದು ಬುತ್ತಿ ಸರ್ವಜ್ಞ ಎನ್ನುವಂತೆ ಇಂದು ನೀವು ಸ್ವಯಂ ಪ್ರೇರಿತರಾಗಿ ಎಲ್ಲಾ ವಿದ್ಯಾರ್ಥಿನಿಯರು ರಕ್ತದಾನ ಮಾಡಲು ಮುಂದೆ ಬಂದಿರುತ್ತೀರಿ. ಆದರೆ ತೂಕ ಮತ್ತು ಹಿಮೋಗ್ಲೋಬಿನ್ ಹೆಚ್ಚಿಗೆ ಇದ್ದವರು ಮಾತ್ರ ರಕ್ತದಾನ ಮಾಡಲು ಅರ್ಹತೆಯನ್ನು ಪಡೆಯುತ್ತೀರಿ. ಆದಕಾರಣ ದೈಹಿಕ, ಮಾನಸಿಕವಾಗಿ ಆರೋಗ್ಯವನ್ನು ಹೊಂದಿದ ವಿದ್ಯಾರ್ಥಿನಿಯರು ರಕ್ತದಾನ ಮಾಡುವುದರ ಮೂಲಕ ಮಾನವ ಜೀವ ಸಂಕುಲಗಳಿಗೆ ಸಹಾಯ ಮಾಡಿ ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದಲ್ಲಿಆರೋಗ್ಯಸಿಬ್ಬಂದಿಗಳಾದ ಬಸವರಾಜ ಮುದಗಲ್, ಮಹಾಂತೇಶ ಶಿವಪುರಮಠ, ಮಹೇಶ ವಡ್ಡರಕಲ್ಲ, ಶ್ರೀಮತಿ ಅಂಬಿಕಾ ಗೌಡರ, ಬಸವರಾಜ ಕೊಪ್ಪಳ, ಮಂಜುನಾಥ ಟಕ್ಕಳಕಿ, ಶೇಖರ ಗಣಿ ಹಾಗೂ ಜಮಖಂಡಿ ತಾಲ್ಲೂಕಾ ಆಸ್ಪತ್ರೆ ಸಿಬ್ಬಂದಿಯವರಾದ ವಿ. ಎ. ದಳವಾಯಿ ಹಾಗೂ ಡಾ. ಪ್ರಿಯಾ ಸಿಂಗ್, ಡಾ. ವಿ. ಆರ್. ದಳವಾಯಿ, ಡಾ. ಎಮ್. ಎಮ್. ಮಂಟೂರ, ಎ. ಎಸ್. ಪೂಜಾರಿ, ಆರ್. ಎಸ್. ಜಾಧವ, ಆರ್. ಬಿ. ಶಿತೋಳೆ, ಶ್ರೀಮತಿ ಶ್ರೀಮಯಿ ಎನ್., ಡಾ. ಎಸ್. ಎನ್. ಮಣಕವಾಡ, ಶ್ರೀಮತಿ ಸುಮಾ ವೈ. ಎನ್., ಅಮಿತ ಹಿರೇಮಠ ಉಪಸ್ಥಿತರಿದ್ದರು.

ಒಟ್ಟು 56 ಜನ ವಿದ್ಯಾರ್ಥಿನಿಯರು ರಕ್ತದಾನ ಮಾಡಿದರು. ಹಾಗೂ 86 ಜನ ವಿದ್ಯಾರ್ಥಿನಿಯರ ರಕ್ತದ ಗುಂಪು ತಪಾಸಣೆ ಮಾಡಲಾಯಿತು. ಇದೇ ಸಂದರ್ಭದಲ್ಲಿ ಮಹಾವಿದ್ಯಾಲಯದ ಸಿಬ್ಬಂದಿಯವರಾದ ಪ್ರೊ. ಯು. ಎಸ್. ದೇಸಾಯಿ, ಸಿ. ವಿ. ಗುಣದಾಳ, ಆರ್. ಎ. ಸಂಗಣ್ಣವರ, ಡಾ. ನಮಿತಾ ವಸ್ತ್ರದಮಠ ಇವರೆಲ್ಲರೂ ಸ್ವಯಂ ಪ್ರೇರಿತವಾಗಿ ರಕ್ತ ದಾನ ಮಾಡಿದರು.

# ಯೋಧರ ಒಳಿತಿಗೆ ವಿಶೇಷ ಪೂಜೆ



**ರಬಕವಿ-ಬನಹಟ್ಟಿ:** ಭಾರತೀಯಸೇನೆಯಯೋಧರಿಗೆ ಹೆಚ್ಚಿನ ಶಕ್ತಿಯನ್ನು ಭಗವಂತ ಅನುಗ್ರಹಿಸಲಿಯೆಂದು ವಿಶೇಷ ಸಂಕಲ್ಪ ಪೂಜೆಯನ್ನು ಬನಹಟ್ಟಿಯ ಕಾಡಸಿದ್ಧೇಶ್ವರ ದೇವಸ್ಥಾನ ಸೇರಿದಂತೆ ವಿವಿಧ ದೇವಾಲಯಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರಿಂದ ನೆರವೇರಿಸಲಾಯಿತು.

ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ಮಾತನಾಡಿ, ಭಾರತೀಯ ಸೇನೆಯ ಹೆಸರಿನಲ್ಲಿ ಹಾಗು ಭಾರತೀಯ ಯೋಧರಿಗೆ ಒಳಿತಾಗಲಿ, ಸೇನೆಗೆ ಹೆಚ್ಚಿನ ಶಕ್ತಿಯನ್ನು ಭಗವಂತ ಅನುಗ್ರಹಿಸಿ ಕರುಣಿಸಲೆಂದು ವಿಶೇಷ ಸಂಕಲ್ಪದೊಂದಿಗೆ ಪೂಜೆ ಸಲ್ಲಿಸಿದ್ದೇವೆಂದರು. ಕಾಶ್ಮೀರದ ಪಹಲ್ಗಾಮ್ನಲ್ಲಿ ನಡೆದ ಭಯೋತ್ಪಾದಕರ ದಾಳಿಗೆ ಇಡೀ ದೇಶವೆ ಖಂಡನೆ ಮಾಡುತ್ತಿದೆ.

ಇದಕ್ಕೆ ತಕ್ಕ ಉತ್ತರ ನೀಡುವಲ್ಲಿ ಕೇಂದ್ರ ಸಾಹಸಕ್ಕೆ ಕೈ ಹಾಕಿದೆ. ಗಡಿ ಹಾಗು ದೇಶದ ಜನರ ರಕ್ಷಣೆಗೆ ಪ್ರಾಣ ಪಣತೊಟ್ಟು ನಿಂತಿರುವ ನಮ್ಮ ಯೋಧರಿಗೆ ಒಳಿತಾಗಲಿ ಎಂದರು.

ಭೀಮಶಿ ಮಗದುಮ್, ಬಸವರಾಜ ಕೊಕಟನೂರ, ರವೀಂದ್ರ ಬಾಡಗಿ, ಶೇಖರ ಹಕ್ಕಲದಡ್ಡಿ, ಸದಾಶಿವ ಗೋಂದಕರ, ಗೋವಿಂದ ಜಾಧವ, ಸುರೇಶ ಪಾಟೀಲ, ರಾಜು ಶಿರಹಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನಿಂಗಾಪುರದಲ್ಲಿ ವಿಜ್ರಂಭಣೆಯ ಮಲ್ಲಮ್ಮ ಜಯಂತಿ ಆಚರಣೆ



**ಮುಧೋಳ :** ತಾಲ್ಲೂಕಿನ ನಿಂಗಾಪುರ ಗ್ರಾಮದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮನವರ 603 ನೇ ಜಯಂತಿ ಉತ್ಸವ ವರನ್ನು ವಿಜ್ರಂಭಣೆಯಿಂದ ಆಚರಿಸಲಾಯಿತು.

ಗ್ರಾಮದಲ್ಲಿ ಶನಿವಾರ ತಳಿರು ತೋರಣಗಳನ್ನು ಕಟ್ಟಿ, ಬಣ್ಣ ಬಣ್ಣದ ಪೇಪರ್ ಗಳನ್ನು ಕಟ್ಟಿ, ಅತ್ಯಂತ ಸಂಭ್ರಮದಿಂದ ಮಹಾಸಾಧ್ವಿಯ ಜನ್ಮದಿನ ಆಚರಣೆಯನ್ನು ಮಾಡಿದ ಯುವಕರು ಹೇಮರೆಡ್ಡಿ ಮಲ್ಲಮ್ಮಳ ಭಾವಚಿತ್ರಕ್ಕೆಪುಷ್ಪಾಲಂಕಾರ ಮಾಡಿದ್ದರು, ಯುವ ಮುಖಂಡ ಭೀಮಶಿ ಹೊಸಮನಿ ಗ್ರಾಮದ ಯುವಕರನ್ನು ಸಂಘಟಿಸಿ ಹೇಮರೆಡ್ಡಿ ಮಲ್ಲಮ್ಮನವರ ಜೀವನ ಶೈಲಿ ಎಲ್ಲರಿಗೂ ಮಾದರಿಯಾಗಿದ್ದು, ಅಂಥ ಸಂಕಷ್ಟದಲ್ಲಿಯೂ ಮಲ್ಲಮ್ಮ ತನ್ನ ದೇವರ ಮೇಲಿನ ಭಕ್ತಿಯನ್ನು ಕಡಿಮೆ ಮಾಡಲಿಲ್ಲ, ಕಾಯಕಯೋಗಿ ಯಾಗಿದ್ದ ಅವಳು ಬೇರೆಯವರ ಮಾತುಗಳಿಗೆ ಕಿವಿಗೊಡದೆ ಮಹಾನ್ ಶಿವಶರಣೆ ಎನಿಸಿಕೊಂಡರು ಎಂದು ಯುವಕರಿಗೆ ತಿಳಿಸಿದರು.

ಗ್ರಾಮದ ನೂರಾರು ಯುವಕರು ಭಾಗವಹಿಸಿದ್ದರು.

# ನಾಟ್ಯ ಮಯೂರಿ ಪೃಥ್ವಿ ಎಮ್. ಹೆಗಡೆಗೆ ವಿಶೇಷ ಸನ್ಮಾನ



**ತಾಳಿಕೋಟೆ :** ಪಟ್ಟಣದ ನಾಟ್ಯಮಯೂರಿರಾಷ್ಟ್ರೀಯಪ್ರಶಸ್ತಿ ವಿಜೇತೆ ಕುಮಾರಿ ಪೃಥ್ವಿ ಎಮ್ ಹೆಗಡೆ ಅವರಿಗೆ ಶ್ರೀ ವಿರಕ್ತೇಶ್ವರ ಭರತನಾಟ್ಯ ತರಬೇತಿ ಸಂಸ್ಥೆಯ 6 ನೇ ವಾರ್ಷಿಕೋತ್ಸವ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಿಗೆ ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು 2 ತಿಂಗಳ ಉಚಿತ ನೃತ್ಯ ತರಬೇತಿ ಸಮಾರೋಪ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಶೇಷವಾಗಿ ಮಹಿಳೆಯರು ಸನ್ಮಾನಿಸಿ ಗೌರವಿಸಿದರು.

ನಾಟ್ಯಮಯೂರಿ ಪೃಥ್ವಿ ಎಮ್ ಹೆಗಡೆ ಇವರು 1000 ನೇ ನೃತ್ಯ ಪ್ರದರ್ಶನ ನೀಡಿ ಜನರ ಮೆಚ್ಚುಗೆಗೆ ಪಾತ್ರರಾಗಿರುವ ಹಿನ್ನೆಲೆ ಮಹಿಳೆಯರಾದ ಶಶಿಕಲಾ ಯಾಳಗಿ, ರೇಖಾ ಸಿದ್ದರೆಡ್ಡಿ, ಸುನಂದಾ ಕಾದಂಮು, ಶೋಭಾ ಸುಭೇದಾರ, ಅನಾಮಿಕ ಆಗರ್ವಾಲಾ, ಅಮಿತ ಆಗರ್ವಾಲಾ, ಸವಿತಾ ಬಣದ, ಸ್ವೇತಾ ಯರಗಲ್, ಅವರು ಸನ್ಮಾನಿಸಿ ಗೌರವಿಸಿದರು.

ಈ ಸಮಯದಲ್ಲಿ ನಾವದಗಿ ಪೂಜ್ಯರು. ತೂರವಿ ಪೂಜ್ಯರು. ಮಹಾದೇವಯ್ಯ ಶಾಸ್ತ್ರಿಗಳು, ಸಿ ಬಿ ಅಸ್ಕಿ, ಜಿ.ಟಿ.ಘೋರ್ಪಡೆ, ಜೈಯಸಿಂಗ್ ಮೂಲಿಮನಿ, ವಾಸುದೇವ ಹೋಬಸೂರ. ಡಾ. ತಳ್ಳೊಳ್ಳಿ. ಡಾ. ಗಂಗಾಂಬಿಕಾ ಪಾಟೀಲ್, ಸಂಸ್ಥೆಯ ಅಧ್ಯಕ್ಷ ವಿನೋದಕುಮಾರ ಚಿಕ್ಕಮಠ, ಕಾಶಿನಾಥ್ ಕಾರಗನೂರ, ಮೊದಲಾದವರು ಉಪಸ್ಥಿತರಿದ್ದರು.

# ಹೊಸಪೇಟೆ ಬಳ್ಳಾರಿ ಮಾರ್ಗದಲ್ಲಿ ಹೆಚ್ಚಿನ ರೈಲುಗಳ ಓಡಾಟಕ್ಕೆ ರೈಲ್ವೆ ಕ್ರಿಯಾ ಸಮಿತಿಯಿಂದ ವಿ.ಸೋಮಣ್ಣ ಇವರಲ್ಲಿ ಮನವಿ



**ಬಳ್ಳಾರಿ :** ಬಳ್ಳಾರಿ, ಹೊಸಪೇಟೆ ಮಧ್ಯದಲ್ಲಿ ತಾತ್ಕಾಲಿಕವಾಗಿ ನಿಲುಗಡೆಯಾಗಿರುವ ರೈಲುಗಳನ್ನು ಪುನರ್ ಆರಂಭಿಸಿ ಎರಡು ನಗರಗಳ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಕರ್ನಾಟಕ ರಾಜ್ಯ ರೈಲ್ವೆ ಕ್ರಿಯಾ ಸಮಿತಿ ಹಾಗೂ ಬಿಜೆಪಿ ಪಕ್ಷದ ಮುಖಂಡರ ನಿಯೋಗ

ಹೊಸಪೇಟೆ ನಗರದ ರಾಯಲ್ ಆರ್ಕಿಡ್ ಹೋಟೆಲ್ ನಲ್ಲಿ ಕೇಂದ್ರ ರೈಲ್ವೆ ಸಹಾಯಕ ಸಚಿವರಾದ ವಿ. ಸೋಮಣ್ಣ ಇವರನ್ನು ಭೇಟಿಯಾಗಿ ಚರ್ಚಿಸಿ ಎಂಟು ರೈಲುಗಳಿಗೆ ಸಂಬಂಧಿಸಿದಂತೆ ಮನವಿ ಪತ್ರ ನೀಡಿ ತೆಗೆತಗೊಂಡ ಮತ್ತು ತಾತ್ಕಾಲಿಕವಾಗಿ ರದ್ದು ಪಡಿಸಿದ ರೈಲುಗಳನ್ನು ಮತ್ತೆ ಓಡಿಸಿ ಬಳ್ಳಾರಿ ಮತ್ತು ಹೊಸಪೇಟೆ ನಗರದ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ರೈಲ್ವೆ ಕ್ರಿಯಾ ಸಮಿತಿಯ ಮಹೇಶ್ವರ ಸ್ವಾಮಿ ಸೇರಿದಂತೆ ಇತರ ಪದಾಧಿಕಾರಿಗಳು ಮನವಿ ಮಾಡಿದರು.

ಈಗಾಗಲೇರದ್ದುಪಡಿಸಲಾದಅಥವಾನಿಲುಗಡೆಯಾಗಿರುವ ಬೆಳಗಾವಿ ಬಳ್ಳಾರಿ ಮುನುಗೂರು ಶಿವಮೊಗ್ಗ ಬಳ್ಳಾರಿ ಚೆನ್ನೈ ಕದಿರಿ ದೇವನಪಲ್ಲಿ ಬಳ್ಳಾರಿ ತಿರುಪತಿ ರೈಲುಗಳನ್ನು ಕೂಡಲೆ ಆರಂಭಿಸುವುದರೊಂದಿಗೆ ಅನೇಕ ವರ್ಷಗಳ ಬೇಡಿಕೆಯಾದ

ಹೊಸಪೇಟೆ ಬಳ್ಳಾರಿ ಮಾರ್ಗದಲ್ಲಿ ಬೆಂಗಳೂರಿಗೆ ಉದಯ ಒಂದೇ ಭಾರತ ಇಲ್ಲವೇ ಇಂಟರ್ಸಿಟಿ ರೈಲು ಆರಂಭಿಸುವಂತೆ ಸಮಿತಿ ರೈಲ್ವೆ ಕ್ರಿಯಾ ಸಮಿತಿಯ ಅಧ್ಯಕ್ಷ ಕೆ ಎಂ ಮಹೇಶ್ವರ ಸ್ವಾಮಿ ರೈಲ್ವೆ ಸಚಿವರಲ್ಲಿ ಮನವಿ ಮಾಡಿ, ಕಳೆದ 20 ವರ್ಷಗಳಿಂದ ನಾವು ರೈಲ್ವೆ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತಾಬಂದಿರುತ್ತೇವೆಆದರೆನಮ್ಮಬೇಡಿಕೆಯನ್ನು ಯಾವ ಸಚಿವರು

ಈಡೇರಿಸಿರುವುದಿಲ್ಲ ಕಾರಣ ನಮ್ಮದೇ ರಾಜ್ಯದ ಸಚಿವರಾಗಿರುವ ತಾವುಗಳು ತಮ್ಮಅಧಿಕಾರದ ಅವಧಿಯಲ್ಲಿ ರೈಲುಗಳನ್ನು ಆರಂಭಿಸಲು ಕ್ರಮ ಕೈಗೊಳ್ಳಬೇಕೆಂದು ರೈಲ್ವೆ ಸಹಾಯಕ ಸಚಿವರಾದ ಮಂತ್ರಿ ವಿ ಸೋಮಣ್ಣ ಅವರಲ್ಲಿ ಕೋರಿದರು.

ಅಷ್ಟೇ ಅಲ್ಲದೆ ಗದಗ್ ನಿಂದ ಬಳ್ಳಾರಿ ಚಿತ್ರದುರ್ಗ ಮಾರ್ಗದಲ್ಲಿ ಮಂಗಳೂರಿಗೆ ರೈಲು ಆರಂಭಿಸಬೇಕು ಗುಂತಕಲ್ ಚಿಕ್ಕಜಾಜೂರು ರೈಲಿನ ಸೇವೆಯನ್ನು ಚಿಕ್ಕಮಂಗಳೂರುವರೆಗೆ ವಿಸ್ತರಿಸಿದಲ್ಲಿ ಧರ್ಮಸ್ಥಳಕ್ಕೆ ಹೋಗಿ ಬರಲು ಅನುಕೂಲವಾಗುವುದೆಂದು ಮನವರಿಕೆ ಮಾಡಿಕೊಡಲಾಯಿತು. ಮತ್ತು ಅದೇ ರೀತಿಯಾಗಿ ಮುಂಬೈ ಹೊಸಪೇಟೆ, ಸೋಲಾಪುರ್ ಹೊಸಪೇಟೆ ರೈಲುಗಳನ್ನು ಬಳ್ಳಾರಿ ಯವರಿಗೆ ವಿಸ್ತರಿಸಿದಲ್ಲಿ ಬಳ್ಳಾರಿ ಭಾಗದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲವಾಗುವುದೆಂದು ಸಮಿತಿ ಅಧ್ಯಕ್ಷ ಕೆಎಂ ಮಹೇಶ್ವರ ಸ್ವಾಮಿ ಹಾಗೂ ಬಳ್ಳಾರಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಅನಿಲ್ ನಾಯ್ಡು ಮೋಕ ಮಂತ್ರಿಗಳಲ್ಲಿ ಮನವಿ ಮಾಡಿ ತಿಳಿಸಿದರು.

ನಿಯೋಗದಲ್ಲಿ ವಿಜಯನಗರ ಜಿಲ್ಲೆಯ ಬಿಜೆಪಿ ಅಧ್ಯಕ್ಷ ಸಂಜೀವ್ ರೆಡ್ಡಿ ಬಿಜೆಪಿ ಮಾಜಿ ಅಧ್ಯಕ್ಷ ಚನ್ನಬಸನಗೌಡ ಜಿಲ್ಲಾ ಪರಿಷತ್ ಮಾಜಿ ಸದಸ್ಯರುಗಳಾದ ಗೋನಾಳು ರಾಜಶೇಖರಗೌಡ ಅಯ್ಯಾಳಿ ತಿಮ್ಮಪ್ಪ ಡಿ ಆರ್ ಯು ಸಿ ಸಿ ಸದಸ್ಯ ಕೆಎಂ ಕೊಟ್ರೇಶ್ ಜನತಾ ಬಜಾರ್ ಮಾಜಿ ಅಧ್ಯಕ್ಷ ಜಿ ನೀಲಕಂಠಪ್ಪ ಸಮಿತಿಯ ಪದಾಧಿಕಾರಿ ಎಚ್ ಕೆ ಗೌರಿಶಂಕರ್, ವಿಜಯನಗರ ಕಾಲೇಜಿನ ಅಧ್ಯಕ್ಷ ಮೆಟ್ರಿ ಮಲ್ಲಿಕಾರ್ಜುನ ಉಪಸ್ಥಿತರಿದ್ದರು

**ವರದಿ ಇಜಿ ರೆಡ್ಡಿ**

# ರಾಮನಗರದ ವಿಕಲಚೇತನ ಅಪ್ರಾಪ್ತ ಬಾಲಕಿಯ ಅತ್ಯಾಚಾರ ಆರೋಪಿಗಳಿಗೆ ಗಲ್ಲು ಶಿಕ್ಷೆ ನೀಡಲು ಉಳೂರು ಸಿದ್ದೇಶ್ ಒತ್ತಾಯ



**ಬಳ್ಳಾರಿ :** ರಾಮನಗರ ಜಿಲ್ಲೆಯ ಬಿಡದಿ ಬಳಿ ಅನುಮಾನಾಸ್ಪದವಾಗಿ 14 ವರ್ಷದ ಬಾಲಕಿ ಖುಷಿ ಎಂಬುವವರ ಮೇಲೆ ಅತ್ಯಾಚರವೇಸಗಿ ಕೊಲೆ ಮಾಡಿರುವ ಆರೋಪಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಕಠಿಣ ಶಿಕ್ಷೆಗೆ ಗುರಿಪಡಿಸಬೇಕೆಂದು ಬಳ್ಳಾರಿ ಜಿಲ್ಲೆಯ ಸಾಮಾಜಿಕ ಹೋರಾಟಗಾರ ಊಳೂರು ಸಿದ್ದೇಶ್ ಆಗ್ರಹಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಸ್ಥಾನಿಕ ಅಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ ರಾಜ್ಯದಲ್ಲಿ ಇತ್ತೀಚೆಗೆ ಅಮಾಯಕ ಚಿಕ್ಕ ಚಿಕ್ಕ ಬಾಲಕಿಯರ ಮೇಲೆ ಅತ್ಯಾಚಾರ ಮತ್ತು ಕೊಲೆಯಂತ ಕ್ರೂರ ಘಟನೆಗಳು ನಡೆಯುತ್ತಿವೆ, ಅದೇ ರೀತಿಯಾಗಿ ರಾಮನಗರ ಜಿಲ್ಲೆಯ ಬಿಡದಿ ಬಳಿ ಅನುಮಾನಾಸ್ಪದವಾಗಿ 14 ವರ್ಷದ ಮಾತು ಬಾರದ, ಕಿವಿ ಕೇಳಿಸದ ಬಾಲಕಿ ಖುಷಿ ಎಂಬುವವರ ಮೇಲೆ ದುಷ್ಕರ್ಮಿಗಳು ಅತ್ಯಾಚರವೇಸಗಿ ಕೊಲೆ ಮಾಡಿರುವ ಅನುಮಾನ ಇದೆ ಪೊಲೀಸ್ ಅಧಿಕಾರಿಗಳು ಸೂಕ್ತ ತನಿಖೆಯನ್ನು ನಡೆಸಿ ಅತ್ಯಾಚಾರ ಮತ್ತು ಕೊಲೆಯಂತ ಘಟನೆ ನಿಜವೇ ಆದಲ್ಲಿ ಆರೋಪಿಗಳನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಬೇಕೆಂದು ರಾಜ್ಯದ ಗೃಹ ಮಂತ್ರಿಗಳಲ್ಲಿ ಒತ್ತಾಯಿಸಿದರು.

ರಾಜ್ಯದಲ್ಲಿ ಇಂತಹ ಹೀನ ಕೃತ್ಯಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತದೆ ಇವೆ ಇಂತಹ ಅಮಾನವೀಯ ದುರ್ಘಟನೆಯನ್ನು ತಡೆಯಲು ಪೊಲೀಸ್ ಇಲಾಖೆ ಗೃಹ ಇಲಾಖೆ ವಿಫಲವಾಗಿರುತ್ತದೆ ಎಂದು ಸಿದ್ದೇಶ್ ಆರೋಪಿಸಿದರು.

ಇಂತಹ ಕೃತ್ಯಗಳಿಂದ ಸಾರ್ವಜನಿಕರಿಗೆ ಸರ್ಕಾರದ ಕಾರ್ಯವೈಖರ್ಯ ಮೇಲೆ ನಂಬಿಕೆ ಇಲ್ಲದಂತಾಗಿದೆ, ಆದ್ದರಿಂದ ಈ ರಾಜ್ಯ ಮುಖ್ಯಮಂತ್ರಿಗಳು ಮತ್ತು ಗೃಹ ಮಂತ್ರಿಗಳು ಇಂತಹ ಘಟನೆಗಳು ರಾಜ್ಯದಲ್ಲಿ ನಡೆಯದಂತೆ ಎಚ್ಚರವಹಿಸಿ, ಅತೀ ಜರೂರಾಗಿ ತಪ್ಪಿಸ್ಥರನ್ನು ಬಂಧಿಸಿ, ಕಾನೂನು ರೀತಿಯ ಕ್ರಮ ಕೈಗೊಂಡು ಗಲ್ಲು ಶಿಕ್ಷೆಯನ್ನು ವಿಧಿಸಬೇಕೆಂದು ಈ ಮೂಲಕ ಸಂತ್ರಸ್ತ ಕುಟುಂಬದ ಸದಸ್ಯರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ ಎಂದರು.

**ವರದಿ ಇಜಿ ರೆಡ್ಡಿ**

# ಬಿಜೆಪಿಯವರಿಗೆ ಮೂಲಭೂತವಾದ ಆರ್ಥಿಕತೆ ಗೊತ್ತಿಲ್ಲ ಸಾಧನ ಸಮಾವೇಶಕ್ಕೆ ರಾಜ್ಯದಿಂದ 3ಲಕ್ಷ ಜನ ಸೇರುವ ಸಾಧ್ಯತೆ ಇದೆ : ಸಿ ಎಂ ಸಿದ್ದು

## 24-25ರ ಬಜೆಟ್ 3.71ಸಾವಿರ ಕೋಟಿಯಿಂದ 25-26ರಲ್ಲಿ 4.9ಸಾವಿರ ಕೋ.ಹೆಚ್ಚಾಗಿದೆ, 38ಸಾವಿರ ಕೋಟಿ ಬ.ಗಾತ್ರ ಹೆಚ್ಚಾಗಿದೆ : ಸಿ ಎಂ ಸಿದ್ದು

**ಹೊಸಪೇಟೆ :** ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ 20ನೇ ತಾರೀಕಿನಂದು ಜರುಗಲಿರುವಸರ್ಕಾರದಸಾಧನಾಸಮಾವೇಶ ಕುರಿತು ವೇದಿಕೆ ಸಿದ್ಧತೆಗಳನ್ನು ಪರಿಶೀಲಿಸಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು.

ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆ ಸೇರಿದಂತೆ ಇತರೆ ವಿವಿಧ ಇಲಾಖೆಯ ಸಾಧನೆಗಳನ್ನು ಜನರಿಗೆ ತಿಳಿಸಬೇಕಿದೆ.

ಎರೆಡು ವರ್ಷಗಳಲ್ಲಿ ಮಾಡಿರುವ ಕಾರ್ಯಕ್ರಮಗಳನ್ನ ಜನರ ಮುಂದೆ ಇಡಬೇಕಾಗಿದೆ ಹಾಗಾಗಿ ಈ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಚುನಾವಣೆಪೂರ್ವದಲ್ಲಿಪಕ್ಷದಪ್ರಣಾಳಿಕೆಯಲ್ಲಿ ಹೇಳಿರುವಂತೆ ಸರ್ಕಾರ ಪ್ರಾರಂಭವಾದ ಮೊದಲನೇ ಕ್ಯಾಬಿನೆಟ್ ಮೀಟಿಂಗ್ ನಲ್ಲಿ ಪಂಚ ಗ್ಯಾರೆಂಟಿ ಯೋಜನಗಳನ್ನು ಜಾರಿಗೆ ತರಲು ನಲ್ಲಿತೀರ್ಮಾಣಿಸಿ. ಜೂನ್ 11ಕ್ಕೆಶಕ್ತಿಯೋಜನೆ, ಜುಲೈನಲ್ಲಿ ಅನ್ನಭಾಗ್ಯ, ಗೃಹ ಜ್ಯೋತಿ, ಆಗಸ್ಟ್ ನಲ್ಲಿ ಗೃಹಲಕ್ಷ್ಮಿ, ಜನವರಿ ತಿಂಗಳಲ್ಲಿ ಯುವ ನಿಧಿ ಯೋಜನೆ ಜಾರಿಮಾಡಲಾಯಿತು.

23ರ ರ ಚುನಾವಣೆಗಳಲ್ಲಿ ಗೆದ್ದ 136 ಶಾಸಕರಿದ್ದೇವೆ.

ಉಪ ಚುಚುನಾವಣೆ ಆದ ನಂತರ 138 ಪಕ್ಷೇತರ ಸೇರಿ 140 ಸದಸ್ಯರಿದ್ದು ಎಲ್ಲಾ ಶಾಸಕರು ಈ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ. ಎರೆಡು ವರ್ಷಗಳಲ್ಲಿ ನಾವು ಭರವಸೆ ಕೊಟ್ಟಿರುವ ಎಲ್ಲವನ್ನು ಈಡೇರಿಸಿದ್ದೇವೆ.

ಗ್ಯಾರಂಟಿ ಯೋಜನೆಗಳನ್ನು ಮಾಡಿ ಅಭಿವೃದ್ಧಿಗೆ ದುಡ್ಡಿಲ್ಲ ಎಂದು ವಿರೋಧ ಪಕ್ಷದವರು ಹೇಳುತ್ತಿದ್ದಾರೆ.

ಗ್ಯಾರಂಟಿ ಯೋಜನೆಗಳಿಗಾಗಿ 90ಸಾವಿರ ಕೋಟಿ ರೂ.ಗಳನ್ನ ತೆಗೆದಿಟ್ಟಿದ್ದೇವೆ. ಕ್ಯಾಪಿಟಲ್ ಎಕ್ಸ್ಪೆಂಡಿಚರ್ (ಆಸೆಟ್ಸ್ ಕ್ರಿಯೇಷನ್ )ಗಾಗಿ 24-25ನೇ ಸಾಲಿನಲ್ಲಿ 51ಸಾವಿರ ಕೋಟಿ ರೂ. ಗಳನ್ನ ಖರ್ಚು ಮಾಡಿದ್ದೇವೆ. 25-26ನೇ ಸಾಲಿನಲ್ಲಿ 83ಸಾವಿರ ಕೋಟಿ ರೂ. ಗಳನ್ನ ಮೀಸಲಿರಿಸಿದ್ದೇವೆ. ಹಿಂದಿನ ವರ್ಷ ಗ್ಯಾರಂಟಿ ಯೋಜನೆಗಳಿಗೆ 52ಸಾವಿರದ 9ಕೋಟಿ ಮೀಸಲಿಟ್ಟಿದ್ದೆವು. 25ರಲ್ಲಿ 50ಸಾವಿರದ 18ಕೋಟಿಗಳನ್ನ ಇಟ್ಟಿದ್ದೇವೆ. ಇನ್ನೂ ಹೆಚ್ಚಿನದಾಗಿ ಬೇಕಾಗಿದ್ದಲ್ಲಿ ಒದಗಿಸಿ ಕೊಡಲಾಗುವುದು.

ಈ ವರ್ಷ ಗ್ಯಾರಂಟಿ ಯೋಜನೆಗಳಿಗೆ ಮತ್ತು ಕ್ಯಾಪಿಟಲ್ ಎಕ್ಸ್ಪೆಂಡಿಚರ್ ಗೆ ಒಟ್ಟಾರೆಯಾಗಿ ಈ ವರ್ಷ 134ಕೋಟಿ ಮೀಸಲಿಟ್ಟಿದ್ದೇವೆ.

ಕಾಂಗ್ರೇಸ್ ಸರ್ಕಾರ ಬಂದಾಗಿನಿಂದ ಕೆ.ಕೆ. ಆರ್ .ಡಿ. ಬಿಗೆ ಪ್ರತಿವರ್ಷ 5ಸಾವಿರ ಕೋಟಿ ಕೊಡುತ್ತಿದ್ದೇವೆ. ಬಿಜೆಪಿಯ ಬಸವರಾಜ್ ಬೊಮ್ಮಾಯಿಯವರು ಕೇವಲ 5ಸಾವಿರ ಕೋಟಿ ಕೊಡುತ್ತಿದ್ದರು. ಅದನ್ನು ನಾವು ಹೆಚ್ಚಿಗೆ ಮಾಡಿದ್ದೇವೆ. 371ಜೆ ಹೈದ್ರಾಬಾದ್ ಕರ್ನಾಟಕಕ್ಕೆ 8ಸಾವಿರ ಕೋಟಿ ಕೊಡುತ್ತಿದ್ದೇವೇ.



ಸಾಧನ ಸಮಾವೇಶದಲ್ಲಿ ಹಟ್ಟಿ ಗಳು, ಕ್ಯಾಂಪ್ ಗಳು, ತಾಂಡಾಗಳು, ಹಾಡಿಗಳನ್ನು ಕಂದಾಯ ಸಚಿವರು ಕೃಷ್ಣ ಬೈರೇ ಗೌಡ ಕಂದಾಯ ಗ್ರಾಮ ಮಾಡಿದ್ದು, 1ಲಕ್ಷ 3ಸಾವಿರ ಪಲಾನುಭವಿಗಳಿಗೆ ಹಕ್ಕು ಪತ್ರ ಕೊಡುತ್ತಿದ್ದೇವೆ.

ಜಿಲ್ಲೆಯಲ್ಲಿ 71ಸಾವಿರ ರೈತರಿಗೆ ಪೋಡಿ ಮುಕ್ತಮಾಡಿದ್ದೇವೆ. ರಾಜ್ಯದಿಂದ ಕಾರ್ಯಕ್ರಮಕ್ಕೆ ಕನಿಷ್ಠ 3ಲಕ್ಷ ಜನ ಸೇರುತ್ತಾರೆ ಎಂದು ಎಂದು ಹೇಳಿದರು.

ಕೇಂದ್ರ ಬಿಜೆಪಿ ಸರ್ಕಾರ ನಮ್ಮ ಸರ್ಕಾರದ ಎಲ್ಲಾ ಯೋಜನೆಗಳನ್ನು ಕಾಪಿ ಮಾಡುತ್ತಿದ್ದಾರೆ. ಕರ್ನಾಟಕ ಪ್ರಪಂಚಕ್ಕೆ ಮಾದರಿ ಯಾಗಿದೆ.

"ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ ಗಾಂಧಿ, ವೇಣುಗೋಪಾಲ್, ಎ.ಐ.ಸಿ.ಸಿ ಕಾರ್ಯದರ್ಶಿ ಮತ್ತು ಪಕ್ಷದ ಎಲ್ಲಾ ಶಾಸಕರು ಮತ್ತು ನಾಯಕರನ್ನು ಆಹ್ವಾನಿಸಿದ್ದೇವೆ, ಪ್ರಿಯಾಂಕ ಗಾಂಧಿ, ಬರುವುದು ಅನುಮಾನವಿದೆ ."

"ಇದು ಪಕ್ಷದ ಕಾರ್ಯಕ್ರಮ ಅಲ್ಲ ಸರ್ಕಾರದ ಕಾರ್ಯಕ್ರಮವಾಗಿದ್ದು ಹಾಗಾಗಿ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಚಲುವಾದಿ ನಾರಾಯಣ ಸ್ವಾಮಿ ಬಿಜೆಪಿಯ ಇತರರನ್ನೂ ಆಹ್ವಾನಿಸಿದ್ದೇವೆ."

"ಹೊಸಪೇಟೆಯಲ್ಲಿ ಶುಗರ್ ಕಾರ್ಖಾನೆ ಮಾಡುವುದು ಖಚಿತ, ಭೂಮಿ ಪೂಜೆ ಎಂದು ಮಾಡಬೇಕೆಂದು ನಿಗದಿ ಮಾಡುತ್ತೇವೆ

**" ಗ್ಯಾರಂಟಿ ಯೋಜನೆಗಳನ್ನು ಮಾಡಿ ಅಭಿವೃದ್ಧಿಗೆ ಹಣ ಇಲ್ಲ ಎಂದು ಬಿಜೆಪಿಯವರು ಹೇಳುತ್ತಿರುವುದು ಸುಳ್ಳು. ಈಗಾಗಲೇ ನಾನು ಮತ್ತು ಡಿ.ಕೆ.ಶಿವಕುಮಾರ್ ಅಭಿವೃದ್ಧಿಗಾಗಿ 200 ಕೋಟಿ , 300ಕೋಟಿ, 500ಕೋಟಿ,ಮತ್ತು 700 ಕೋಟಿ ರೂ.ಗಳ ಕಾಮಗಾರಿಗಳಿಗೆ ಶಂಕು ಸ್ಥಾಪನೆ ಮಾಡಿದ್ದೇವೆ. ಕಳೆದ ವರ್ಷ 24-25ರ ಬಜೆಟ್ ಗಾತ್ರ 3.71ಸಾವಿರ ಕೋಟಿಯಾಗಿತ್ತು, 25-26ರಲ್ಲಿ 4.9ಸಾವಿರ ಕೋಟಿ ಬಜೆಟ್ ಯಾಗಿದೆ. ಒಂದು ವೇಳೆ ದಿವಾಳಿಯಾಗಿದ್ದರೆ, ಅಭಿವೃದ್ಧಿ ಕೆಲಸಗಳಿಗೆ ದುಡ್ಡಿಲ್ಲದೆ ಹೋಗಿದ್ದರೆ, ಆರ್ಥಿಕವಾಗಿ ದಿವಾಳಿಯಾಗಿದ್ದರೆ ಬಜೆಟ್ ಗಾತ್ರ ಹೆಚ್ಚಾಗಲು ಹೇಗೆ ಸಾಧ್ಯವಾಗುತ್ತದೆ. ಬಜೆಟ್ ಗಾತ್ರ ಒಂದು ವರ್ಷದಲ್ಲಿ ಸುಮಾರು 38ಸಾವಿರ ಕೋಟಿ ಹೆಚ್ಚಾಗಿದೆ, ಅಭಿವೃದ್ಧಿ ಯಾಗದೆ ಹೋಗಿದ್ದರೆ ಇಷ್ಟೆಲ್ಲ ಮಾಡಲು ಹೇಗೆ ಸಾಧ್ಯವಾಗುತ್ತಿತ್ತು. ಬಿಜೆಪಿ ಯವರಿಗೆ ಮೂಲಭೂತವಾದ ಆರ್ಥಿಕತೆ ಗೊತ್ತಿಲ್ಲ. ರಾಜಕೀಯವಾಗಿ ಮಾತನಾಡುತ್ತಾರೆ."**

ಕರ್ನಾಟಕದಲ್ಲಿ ನುಡಿದಂತೆ ನಡೆದ ಸರ್ಕಾರ ಯಾವುದಾದರೂ ಇದ್ದರೆ ಅದಕ್ಕೆ ಕಾಂಗ್ರೆಸ್ ಸರ್ಕಾರ."

ಈ ಸಂದರ್ಭದಲ್ಲಿ ಬಿ.ಜೆಡ್.ಜಮೀರ್ ಅಹ್ಮದ್ ಖಾನ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ವಸತಿ ಮತ್ತು ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವರು. ಹೆಚ್.ಆರ್. ಗವಿಯಪ್ಪ ವಿಜಯನಗರ ಕ್ಷೇತ್ರದ ಶಾಸಕರು, ಇ.ತುಕಾರಾಂ ಸಂಸದರು ವಿಜಯನಗರ ಮತ್ತು ಬಳ್ಳಾರಿ ,ಶಿವರಾಜ ಎಸ್ ತಂಗಡಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರು. ಕೃಷ್ಣ ಭೈರೆಗೌಡ ಕಂದಾಯ ಸಚಿವರು,

ಹೆಚ್.ಕೆ. ಪಾಟೀಲ್, ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಇಲಾಖೆ ಸಚಿವರು, ಎನ್ ಟಿ ಶ್ರೀನಿವಾಸ ಕೂಡ್ಲಿಗಿ ಶಾಸಕರು, ಎಂ ಪಿ ಲತಾ ಹಡಗಲಿ ಶಾಸಕಿ, ನಾರಾಭಾರತ್ ರೆಡ್ಡಿ ಶಾಸಕರು ಬಳ್ಳಾರಿ, ಹೆಚ್.ಎನ್. ಎಫ್ ಇಮಾಮ್ ನಿಯಾಜಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರುಹೊಸಪೇಟೆ ,

ಎಂ.ಎಸ್.ದಿವಾಕರ್ ಜಿಲ್ಲಾಧಿಕಾರಿ, ನಾಂಗ್ ಜೈ ಮೊಹಮ್ಮದ್ ಅಲಿ ಅಕ್ರಮ್ ಶಾ ಜಿ.ಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ವಿಜಯನಗರ ಜಿಲ್ಲೆ , ಬಿ ಎಲ್ ಶ್ರೀ ಹರಿಬಾಬು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸೇರಿದಂತೆ ಇತರರು ಉಪಸ್ಥಿತರಿದ್ದರು.

**ವರದಿ ಲಕ್ಕಿಮರದ ಮಂಜುನಾಥ**

# ಫುಟ್‌ಪಾತ್ ತೆರವು ಕಾರ್ಯಾಚರಣೆ



**ನವಲಗುಂದ :** ಪಟ್ಟಣದ ಪ್ರಮುಖ ಮಾರುಕಟ್ಟೆಯಾದಗಾಂಧೀಮಾರುಕಟ್ಟೆಯಲ್ಲಿನ ರಸ್ತೆಯ ಬದಿ ತರಕಾರಿ ವ್ಯಾಪಾರಸ್ಥರು ಅನಧಿಕೃತವಾಗಿ ಹಾಕಿರುವ ಟೆಂಟ್‌ಗಳನ್ನು ತೆರವುಗೊಳಿಸುವ ಮೂಲಕ ಬಹುದಿನಗಳಿಂದ ನನೆಗುದಿಗೆ ಬಿದ್ದಿದ್ದ ಫುಟ್‌ಪಾತ್ ತೆರವು ಕಾರ್ಯಾಚರಣೆಯನ್ನು ಪುರಸಭೆ ಸಿಬ್ಬಂದಿ ನಡೆಸಿದರು.

ಕಳೆದ ಹಲವಾರು ವರ್ಷಗಳಿಂದ ರಸ್ತೆ ಅಕ್ಕ,ಪಕ್ಕ ಅನಧಿಕೃತವಾಗಿ ಹಾಕಲಾಗಿದ್ದ ಟೆಂಟ್‌ಗಳಿಂದ ಮಾರುಕಟ್ಟೆ ಪ್ರದೇಶ ಸಾಕಷ್ಟು ಇಕ್ಕಟ್ಟಾಗಿ ರೂಪಗೊಂಡಿತ್ತು, ಇದರಿಂದಾಗಿ ಸಾರ್ವಜನಿಕರು ಸುಗಮವಾಗಿ ನಡೆದಾಡುವುದೂ ತೊಂದರೆಯಾಗಿತ್ತು, ಜತೆಗೆ ತರಕಾರಿ

ವ್ಯಾಪಾರಸ್ಥರ ಅನಧಿಕೃತ ಟೆಂಟ್‌ಗಳಿಂದ ಸಾರ್ವಜನಿಕರಿಗೆ ಹಾಗೂ ಪುರಸಭೆಯಿಂದ ಅಂಗಡಿ ಪಡೆದ ವ್ಯಾಪಾರಸ್ಥರಿಗೂ ತೀವ್ರ ತೊಂದರೆಯಾಗಿತ್ತು

ಈ ಕುರಿತಾಗಿ ಪುರಸಭೆ ಹಲವಾರು ಬಾರಿ ವ್ಯಾಪಾರಸ್ಥರಿಗೆ ಎಚ್ಚರಿಕೆ ನೀಡಿದ್ದರೂ ಎಚ್ಚೆತ್ತುಕೊಳ್ಳದ ವ್ಯಾಪಾರಸ್ಥರಿಗೆ ಬಿಸಿ ಮುಟ್ಟಿಸುವ ಮೂಲಕ ಅತಿಕ್ರಮಣ ತೆರವು ಗೊಳಿಸಿದ್ದಲ್ಲದೇ ಪುರಸಭೆ ನಿಗದಿ ಪಡಿಸಿದ ಗಡಿರೇಖೆಯೊಳಗೆ ವ್ಯಾಪಾರ ನಡೆಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣದಲ್ಲಿ ನೂರಕ್ಕೂ ಹೆಚ್ಚು ಪುರಸಭೆ ಮಳಿಗೆಗಳಿವೆ ಇವನ್ನೆಲ್ಲ ಪುರಸಭೆ ಬಾಡಿಗೆ ನೀಡಿದ್ದು ಬಾಡಿಗೆ ಪಡೆದವರ ಅಂಗಡಿ ಎದುರಿಗೇ ತರಕಾರಿ ವ್ಯಾಪಾರಸ್ಥರು ತಾತ್ಕಾಲಿಕ ತಾಡಪತ್ರಿಗಳ ಟೆಂಟ್‌ಗಳನ್ನು ಹಾಕಿ ವ್ಯಾಪಾರ ನಡೆಸುತ್ತಿದ್ದುದರಿಂದ ಅಂಗಡಿ ಬಾಡಿಗೆದಾರರೂ ವ್ಯಾಪಾರ ವಹಿವಾಟಿಗಾಗಿ ಪರದದಾಡುವಂತಾಗಿತ್ತು,

ಇನ್ನು ರಸ್ತೆಯ ಅಕ್ಕಪಕ್ಕ ಎಗ್ರೈಸ್ ಅಂಗಡಿಗಳು ಚಿಕನ್ ಕಬಾಬ್ ಅಂಗಡಿಗಳು ತಲೆ ಎತ್ತಿದ್ದರಿಂದ ನಾಗರಿಕರು ಚಿನ್‌ತಿಂದು ಉಳಿದ ಕಸವನ್ನು ರಸ್ತೆ ಮೇಲೆಯೇ ಚೆಲ್ಲುತ್ತಿರುವುದರಿಂದ ರಸ್ತೆಗಳಲ್ಲಿ ಹಂದಿ,ನಾಯಿಗಳ ಕಾಟದಿಂದಾಗಿ ಮಹಿಳೆಯರು ಮಾರುಕಟ್ಟೆಗೆ ಬರಲು ಭಯ ಪಡುವಂತಾಗಿತ್ತು, ಹಂದಿ,ನಾಯಿಗಳು ಎಷ್ಟೋಬಾರಿ ಮಹಿಳೆಯರ ಮೇಲೆ ದಾಳಿ ಮಾಡಿದ ಉದಾಹರಣೆಗಳಿವೆ,.

ತರಕಾರಿ ವ್ಯಾಪಾರಸ್ಥರು ನಾವೇನು ಕಮ್ಮಿಯಿಲ್ಲ ಎಂಬಂತೆ ಕೊಳೆತ ತರಕಾರಿಗಳನ್ನು ರಸ್ತೆಗೆ ಎಸೆಯುತ್ತಿರುವುದರಿಂದ ಬಿಡಾಡಿ ದನಗಳ ಹಾವಳಿಯೂ ಹೆಚ್ಚಾಗಿ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿತ್ತು ಆದರೆ ಇಂದು ಪುರಸಭೆ ಕೈಗೊಂಡ ಅನಧಿಕೃತ ತೆರವು ಕಾರ್ಯಾಚರಣೆಯಿಂದಾಗಿ ಪಟ್ಟಣದ ನಾಗರಿಕರು ಸ್ವಲ್ಪ ನಿಟ್ಟುಸಿರು ಬಿಡುವಂತಾಗಿದೆ.

ಈ ಕಾರ್ಯಾಚರಣೆ ಆರಂಭ ಶೂರತ್ವ ಎಂಬಂತಾಗದೇ ಅನಧಿಕೃತ ಟೆಂಟ್‌ಗಳ ನಿರ್ಮಾಣವಾಗದಂತೆ ಪುರಸಭೆ ನಿರಂತರ ಕಾಳಜಿ ಒಹಿಸಬೇಕೆಂಬುದು ನಾಗರಿಕರ ಒತ್ತಾಸೆಯಾಗಿದೆ. ಸಿಪಿಐ ರವಿಕುಮಾರ ಕಪ್ಪತ್ತನವರ,ಪಿಎಸ್‌ಐ ಜನಾರ್ಧನ ಭಟ್ರಹಳ್ಳಿ ಸೇರಿದಂತೆ ಪುರಸಭೆ ಸಿಬ್ಬಂದಿ,ಪೌರ ನೌಕರರು, ಪೊಲೀಸ್ ಸಿಬ್ಬಂದಿ ಫುಟ್‌ಪಾತ್ ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

# ರಾಜ್ಯ ಚುನಾವಣಾ ಆಯುಕ್ತವರಿಂದ ಗ್ರಾಮ ಪಂಚಾಯತ್ ಕಟ್ಟಡ ವೀಕ್ಷಣೆ



**ಗದಗ :** ಕರ್ನಾಟಕ ರಾಜ್ಯ ಚುನಾವಣಾ ಆಯುಕ್ತರಾದ ಸಂಗ್ರೇಶಿ ಅವರು ಗದಗ ಜಿಲ್ಲೆಯ ಹುಲಕೋಟಿ ಗ್ರಾಮ ಪಂಚಾಯತಗೆ ಭೇಟಿ ನೀಡಿ ನೂತನ ಕಟ್ಟಡವನ್ನು ವೀಕ್ಷಣೆ ನಡೆಸಿದರು.

ಹುಲಕೋಟೆಯಲ್ಲಿ ನೂತನವಾಗಿ ನಿರ್ಮಿಸಿರುವ ಗ್ರಾಮ ಪಂಚಾಯತ್ ಕಟ್ಟಡವು ದೇಶದಲ್ಲಿಯೇ ಮಾದರಿ ಗ್ರಾಮ ಪಂಚಾಯತ್ ಕಟ್ಟಡವಾಗಿದೆ.

ಸ್ಥಳೀಯ ಆಡಳಿತ ಕೈಗೊಳ್ಳಲು ಈ ರೀತಿಯ ಮಾದರಿ ಕಟ್ಟಡ ನಿರ್ಮಾಣ ಅತ್ಯಗತ್ಯವಾಗಿದೆ .

ಈ ಮಾದರಿ ಗ್ರಾಮ ಪಂಚಾಯತಿ ಕಟ್ಟಡ ನಿರ್ಮಿಸಲು ಶ್ರಮಿಸಿದ ಪ್ರತಿಯೊಬ್ಬರು ಅಭಿನಂದನೆಗೆ ಅರ್ಹರು ಎಂದು ಪ್ರಶಂಸೆ ವ್ಯಕ್ತ ಪಡಿಸಿದರು.

ಗ್ರಾಮ ಪಂಚಾಯಲ್ಲಿರುವ ಪ್ರತೇಕ ಸಭಾ ಭವನ,ಅಧ್ಯಕ್ಷ, ಆಡಳಿತ ವರ್ಗದವರ ಕಾ೦ು್ರ್ಲ೦ು್ಗ್ಳ್ು ಸುಂದರವಾಗಿದ್ದು ಗ್ರಾಮ ಪಂಚಾಯತಿ ಕಟ್ಟಡದಲ್ಲಿ ಕುಳಿತರೆ ಪ್ರವಾಸಿ ಸ್ಥಳದಲ್ಲಿ ಕುಳಿತಂತಹ ಭಾವನೆ ಬರುತ್ತದೆ ಎಂದು ಸಂತೋಷ ವ್ಯಕ್ತ ಪಡೆಸಿದರು.

ಗ್ರಾಮ ಆಡಳಿತ ಸುಭದ್ರವಾಗಿ ನಡೆದರೆ ದೇಶ ಅಭಿವೃದ್ಧಿ ಹೊಂದುವುದರಲ್ಲಿ ಯಾವ ಸಂಶಯವಿಲ್ಲಹಾಗಾಗಿಪ್ರತಿಗ್ರಾಮ ಪಂಚಾಯತಿಯೂ ಹುಲಕೋಟಿ ಯಂತಹ ಕಟ್ಟಡ ಹೊಂದಿದರೆ ಗ್ರಾಮ ಆಕರ್ಷಕವಾಗಿರುತ್ತದೆ ಎಂದು ನುಡಿದರು.

ಈ ಸುಂದರವಾದ ಪಂಚಾಯತಿ ಕಟ್ಟಡವನ್ನುವಉತ್ತಮರೀತಿಯಲ್ಲಿ ನಿರ್ವಹಣೆ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಉ ಪ ವಿ ಭ ಾ ಗ ಾ ಧಿ ಕಾ ರಿ ಗಂಗಪ್ಪ ಎಂ, ಗದಗ ತಾಲೂಕ ತಹಶಿಲ್ದಾರರ ಶ್ರೀನಿವಾಸ ಕುಲಕರ್ಣಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ಗ್ರಾಮ ಪಂಚಾಯತಿ ಅಧಿಕಾರಿಳು ಸಿಬ್ಬಂದಿಗಳು ಹಾಜರಿದ್ದರು.

# ಬೊಜ್ಜು ಕರಗಿಸಲು ಸೀಬೆ ಮದ್ದು



ಸೀಬೆ ಎಂದರೆ ಎಲ್ಲರಿಗೂ ಇಷ್ಟ. ಈ ಹಣ್ಣು ರುಚಿಯಾಗಿರುತ್ತದೆ. ಸೀಬೆಗೆ ಇನ್ನೊಂದು ಹೆಸರು ಪೇರಲ. ಮಾಗಿದಾಗ ವಿಶಿಷ್ಟ ಪರಿಮಳ ಹರಡುತ್ತದೆ. ಇದು ನೋಡಲೂ ಸಹ ಆಕರ್ಷಕವಾಗಿರುತ್ತದೆ. ಶ್ರಾವಣ ಬಂತು ಎಂದರೆ ಎಲ್ಲಿ ನೋಡಿದರೂ ಸೀಬೆಯೇ. ದೋರೆಗಾಯಿ ಇದ್ದಾಗ ಸೀಬೆಯಲ್ಲಿ ಸಿಹಿ, ಹುಳಿ ಮತ್ತು ಒಗರು ಮಿಳಿತಗೊಂಡಿದ್ದು ತಿನ್ನಲು ಬಲು ರುಚಿಯಾಗಿರುತ್ತದೆ.

ಸೀಬೆಗೆ ಸಂಸ್ಕೃತದಲ್ಲಿ ಅಮೃತಫಲಂ ಎಂದರೆ, ಹಿಂದಿಯಲ್ಲಿ ಅಮ್ರುದ್, ತೆಲುಗಿನಲ್ಲಿ ಜಾಮ, ತಮಿಳಿನಲ್ಲಿ ಕೊಯ್ಯಾಪಳಂ ಹಾಗೂ ಇಂಗ್ಲಿಷ್‌ನಲ್ಲಿ ಗೋವಾ ಎಂದು ಕರೆಯುತ್ತಾರೆ. ಸೀಬೆ ಹಣ್ಣಿನಲ್ಲಿ ಶರೀರಕ್ಕೆ ಅಗತ್ಯವಿರುವ ವಿವಿಧ ಪೋಷಕಾಂಶಗಳು ಸಾಕಷ್ಟಿವೆ. ಹಣ್ಣು ದೊರೆಯುವ ಅವಧಿಯಲ್ಲಿ ಯಥೇಚ್ಛವಾಗಿ ಬಳಸಿ ಲಾಭ ಹೊಂದಬೇಕು. ಅತ್ಯಧಿಕ ಔಷಧೀಯ ಗುಣವಿರುವ ಇದು ಹಿತ್ತಲಗಿಡ. ಇದರ ಬೆಲೆಯೂ ಕಡಿಮೆಯಿದ್ದು, ಆರೋಗ್ಯಕ್ಕೆ ಹೆಚ್ಚು ಉಪಯುಕ್ತ.

ಹಸಿರು ಕಾಯಿ ಒಗರಾಗಿರುತ್ತದೆ. ದೋರೆಗಾಯಿ ಹೆಚ್ಚು ರುಚಿಯಾಗಿರುತ್ತದೆ. ಅಧಿಕ ಪ್ರಮಾಣದ ಶರ್ಕರ ಪಿಷ್ಟಗಳ ಜೊತೆಗೆ ಪ್ರೋಟೀನು, ಸುಣ್ಣ, ರಂಜಕ, ಕಬ್ಬಿಣ ಹಾಗೂ ಕ್ಯಾಲೊರಿ ಸತ್ವಗಳಿರುತ್ತವೆ. 'ಸಿ' ಅನ್ನಾಂಗದ ಜೊತೆಗೆ ಇತರ ಅನ್ನಾಂಗಗಳು ಸ್ವಲ್ಪ ಮಟ್ಟಿಗೆ ಇರುತ್ತದೆ. ದೋರೆಗಾಯಿಗಳಲ್ಲಿ ಅಧಿಕ ಪೆಕ್ಟಿನ್ ಅಂಶವಿರುತ್ತದೆ.

ಸೀಬೆಹಣ್ಣನ್ನು ರುಚಿಗೋಸ್ಕರ ಇಲ್ಲವೇ ಆಹಾರವಾಗಿ ಬಳಸುವುದು ಮಾತ್ರವಲ್ಲ, ಅದು ಉತ್ತಮ ಔಷಧಿಯ ಗುಣ ಸಹ ಹೊಂದಿದೆ. ಅಧಿಕ ಪ್ರಮಾಣದ ಪ್ರೋಟೀನು ಇರುವ ಕಾರಣ ಮಾಂಸಖಂಡಗಳನ್ನು ಬಲಪಡಿಸಬಲ್ಲದು. ನಾರಿನ ಅಂಶ ಅಧಿಕವಿರುವ ಕಾರಣ ತಿಂದ ಆಹಾರ ಕರುಳುಗಳಲ್ಲಿ ಸುಲಭವಾಗಿ ಚಲಿಸುವಂತೆ ಮಾಡಬಲ್ಲದು. ಆದ್ದರಿಂದ ಮಲಬದ್ಧತೆಗೆ ಇದು ದಿವ್ಯೌಷಧ. ಈ ಉದ್ದೇಶಕ್ಕಾಗಿ ರಾತ್ರಿ ಊಟದ ನಂತರ ಪ್ರತಿ ನಿತ್ಯ ಒಂದೆರೆಡು ಹಣ್ಣುಗಳನ್ನು ತಿಂದಲ್ಲಿ ಮುಂಜಾನೆ ಸುಖ ವಿರೇಚನ ಸಾಧ್ಯ.

ಹಣ್ಣುಗಳಲ್ಲಿರುವ ಕಬ್ಬಿಣದ ಅಂಶ ರಕ್ತ ಶುದ್ಧಿಗೆ ಸಹಾಯಕ. ಇದು 'ಸಿ' ಅನ್ನಾಂಗದ ಒಳ್ಳೆಯ ಮೂಲವಾದ್ದರಿಂದ ಹಲ್ಲಿನ ಒಸಡುಗಳು ಗಟ್ಟಿಗೊಳ್ಳುತ್ತವೆ. ಹಾಗೂ ಸ್ಕರ್ವಿ ರೋಗವನ್ನು ದೂರ ಮಾಡಬಲ್ಲದು.

ಸೀಬೆಯಲ್ಲಿ ಬೆಟಾ ಕೆರಾಟಿನ್, ಪೊಟ್ಯಾಶಿಯಂ ಮತ್ತು ಫೈಬರ್ ಅಂಶ ಹೆಚ್ಚಾಗಿರುವುದರಿಂದ ಇದು ಹೆಚ್ಚು ಉಪಯೋಗಕಾರಿಯಾಗಿದ್ದು ರಕ್ತದಲ್ಲಿನ ಸಕ್ಕರೆ ಅಂಶ ಮತ್ತು ಕೊಲೆಸ್ಟ್ರಾಲ್ ನಿಯಂತ್ರಿಸುವ ಗುಣವನ್ನು ಹೊಂದಿದೆ ಹಾಗೂ ಹೃದಯದ ಸ್ವಾಸ್ಥ್ಯವನ್ನು ಕಾಪಾಡುತ್ತದೆ.

ತೂಕ ಕಡಿಮೆ ಮಾಡಿಕೊಳ್ಳಬೇಕೆಂದಿದ್ದರೆ ಸೀಬೆ ಹಣ್ಣು ಒಳ್ಳೆ ಆಯ್ಕೆ. ಸೀಬೆಯಲ್ಲಿ ಅವಶ್ಯಕ ಕಾರ್ಬೋಹೈಡ್ರೇಟ್ ಮತ್ತು ಫೈಬರ್ ಇರುವುದರಿಂದ ಬೊಜ್ಜನ್ನು ನಿಯಂತ್ರಿಸುತ್ತದೆ. ಸೀಬೆಯಲ್ಲಿ ಕೊಬ್ಬಿನಾಂಶ ಕೇವಲ 0.9 ಇದ್ದು, 84 ಕ್ಯಾಲೊರಿ ಮಾತ್ರ ಇರುತ್ತದೆ. ಸೇಬು ಹಣ್ಣಿಗೆ ಹೋಲಿಸಿದರೆ ಸೀಬೆಯಲ್ಲಿ ಶೇ 42 ರಷ್ಟು ಕಡಿಮೆ ಕ್ಯಾಲೊರಿ ಮತ್ತು ಶೇ.38 ರಷ್ಟು ಕಡಿಮೆ ಕೊಬ್ಬಿನಾಂಶವಿದೆ.

ಮಕ್ಕಳಿಗೆ ಕೆಲವರು ಈ ಹಣ್ಣನ್ನು ತಿನ್ನಲು ಕೊಡುವುದಿಲ್ಲ ಅದಕ್ಕೆ ಕಾರಣ ಅವು ಕೆಮ್ಮನ್ನುಂಟುಮಾಡುತ್ತವೆ ಎಂಬ ಶಂಕೆ. ಆದರೆ ಇದು ತಪ್ಪು. ಎಳೆಯ ಮಕ್ಕಳಿಗೆ ಸಾಕಷ್ಟು ಹಣ್ಣನ್ನು ಕೊಡುತ್ತಿದ್ದಲ್ಲಿ 'ಸಿ' ಅನ್ನಾಂಗದ ಅಭಾವ ತಾನೇ ತಾನಾಗಿ ನಿವಾರಣೆಯಾಗುತ್ತದೆ.

ಸುಣ್ಣಗೆ ಕುಟ್ಟಿ ಪುಡಿಮಾಡಿದ ಎಲೆಗಳನ್ನು ಸಂಧಿವಾತದಲ್ಲಿ ಬಳಸುತ್ತಾರೆ. ಅವುಗಳ ತಿಳಿರಸ ಅಪಸ್ಮಾರಕ್ಕೆ ಒಳ್ಳೆಯ ಔಷಧಿ. ಎಲೆಗಳನ್ನು ಕುದಿಸಿ ತೆಗೆದ ನೀರನ್ನು ಮುಕ್ಕಳಿಸುತ್ತಿದ್ದಲ್ಲಿ ಒಸಡುಗಳ ಊತ ಮತ್ತು ಹಲ್ಲು ನೋವು ತಗ್ಗುತ್ತದೆ.

ಸೀಬೆ ಮರದ ಎಲೆಗಳನ್ನು ಅರೆದು ಗಾಯ ಹಾಗೂ ವ್ರಣಗಳಿಗೆ ಪಟ್ಟು ಹಾಕುವುದುಂಟು.

# ಬೆಣ್ಣೆಯಲ್ಲಿರುವ ಆರೋಗ್ಯಕರ ಗುಣಗಳು



ಬೆಣ್ಣೆಯಲ್ಲಿರುವ ಕೊಬ್ಬಿನಂಶವಾದ ಗ್ಲೈಕೋಸ್ಫಿಂಗೊಲಿಪಿಡ್ಸ್ ಜಠರಕ್ಕೆ ಬ್ಯಾಕ್ಟಿರಿಯಾ ಸೋಂಕು ತಾಗದಂತೆ ರಕ್ಷಣೆ ಮಾಡುತ್ತದೆ. ದೇಹದಲ್ಲಿ ವಿಟಮಿನ್ ಎ ಕೊರತೆಯಿಂದ ಥೈರಾಯ್ಡ್‌ಬರುತ್ತದೆ.ಆದರೆಬೆಣ್ಣೆಯಲ್ಲಿವಿಟಮಿನ್ ಎ ಅಧಿಕ ಇರುವುದರಿಂದ ಥೈರಾಯ್ಡ್ ಗ್ರಂಥಿ ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ. ಬೆಣ್ಣೆಯಲ್ಲಿ ವೂಲ್ಜನ್ ಫ್ಯಾಕ್ಟರ್ ಎಂಬ ಅಂಶವಿದ್ದು ಇದು ಮೂಳೆಗಳ ಆರೋಗ್ಯಕ್ಕೆ ತುಂಬಾ ಒಳ್ಳೆಯದು. ತುಪ್ಪ ಹಾಗೂ ಬೆಣ್ಣೆ ಎರಡೂ ಆರೋಗ್ಯಕರವಾದ ಆಹಾರವಾಗಿದ್ದು ಅದರಲ್ಲಿರುವ ಪೋಷಕಾಂಶಗಳು ತುಂಬಾ ಒಂದೇ ರೀತಿ ಇದೆ. ತುಪ್ಪ ಹಾಗೂ ಬೆಣ್ಣೆ ಅದರದೇ ಆದ ರುಚಿ ಹಾಗೂ ಆರೋಗ್ಯಕರ ಗುಣಗಳನ್ನು ಹೊಂದಿದ್ದು ಅವರ ಆರೋಗ್ಯಕ್ಕೆ ಯಾವುದು ಸರಿ ಅನಿಸುತ್ತದೆಯೋ ಅದನ್ನು ಬಳಸಬಹುದು. ಆದರೆ ಲ್ಯಾಕ್ಟೋಸ್ ಅಸಮತೋಲನ ಇರವವರಿಗೆ ಬೆಣ್ಣೆಗಿಂತ ತುಪ್ಪ ಅತ್ಯುತ್ತಮವಾದ ಆಹಾರವಾಗಿದೆ. ಕೆಲವರಿಗೆ ಬೆಣ್ಣೆ ತಿಂದರೆ ಅಲರ್ಜಿ ಉಂಟಾಗುತ್ತದೆ. ಅದಕ್ಕೆ ಕಾರಣ ಅದರಲ್ಲಿರುವ ಲ್ಯಾಕ್ಟೋಸ್ ಅಂಶ. ಇದರಲ್ಲಿರುವ ಹಾಲಿನ ಪ್ರೊಟೀನ್ ಲ್ಯಾಕ್ಟೋಸ್ ಅಸಮತೋಲನ ಇರುವ ವ್ಯಕ್ತಿಯಲ್ಲಿ ಗುಳ್ಳೆಗಳು, ತುರಿಕೆ, ಅಸ್ತಮಾ ಉಲ್ಬಣವಾಗುವಂತಹ ತೊಂದರೆಗಳು ಕಾಣಿಸಿಕೊಳ್ಳುವುದು.

ಆದರೆ ತುಪ್ಪದಲ್ಲಿ ಹಾಲಿನ ಯಾವುದೇ ಪ್ರೋಟೀನ್ ಅಂಶವಿಲ್ಲದಿರುವ ಕಾರಣ ಲ್ಯಾಕ್ಟೋಸ್ ಅಸಮತೋಲನ ಇರುವವರಿಗೆ ತುಪ್ಪ ಒಳ್ಳೆಯದು.

# ರೈಲ್ವೆ ಟ್ರ್ಯಾಕ್ ನಿರ್ಮಾಣ ಬದಲಾಯಿಸಲು ರೈತರ ಒತ್ತಾಯ



**ಬಳ್ಳಾರಿ :** ತಾಲೂಕಿನ ಹದ್ದಿನಗುಂಡುನಿಂದ ಚಾಗನೂರು ಕಪ್ಪಗಲ್ಲು, ಸಿರಿವಾರ, ಬಾಲಾಜಿನಗರ ಕ್ಯಾಂಪ್, ಶ್ರೀಧರಗಡ್ಡೆ, ಲಕ್ಷ್ಮೀನಗರ, ಸೋಮಸಮುದ್ರ ಮಾರ್ಗದಿಂದ ಕೊಳಗಲ್ ಮಾರ್ಗಕ್ಕೆ ರೈಲ್ವೆ ಟ್ರ್ಯಾಕ್ ಹಾಕುವುದಕ್ಕೆ ಡ್ರೋನ್ ಸರ್ವೆ ಕಾರ್ಯ ಮಾಡುತ್ತಿದ್ದು ಈ ಪ್ರದೇಶವು ಬಳ್ಳಾರಿ ನಗರಕ್ಕೆ ಹತ್ತಿರ ಮತ್ತು ಸದರಿ ಜಮೀನುಗಳು ಕೃಷಿ ಜಮೀನು ಗಳಾಗಿರುವುದರಿಂದಸದರಿರೇಲ್ವೆಟ್ರ್ಯಾಕನ್ನು ಬೇರೆ ಕಡೆಗೆ ಬದಲಾಯಿಸಬೇಕೆಂದು ಮೇಲ್ಕಂಡ ಗ್ರಾಮದ ರೈತರುಗಳು ಇಂದು ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಿ ಒತ್ತಾಯಿಸಿದರು.

ಬಳ್ಳಾರಿ ತಾಲೂಕು ವ್ಯಾಪ್ತಿಯಲ್ಲಿ ಬರುವ ಹದ್ದಿನಗುಂಡು ನಿಂದ ಚಾಗನೂರು ಕಪ್ಪಗಲ್ಲು, ಸಿರಿವಾರ, ಬಾಲಾಜಿನಗರ ಕ್ಯಾಂಪ್, ಶ್ರೀಧರಗಡ್ಡೆ, ಲಕ್ಷ್ಮೀನಗರ, ಸೋಮಸಮುದ್ರಮಾರ್ಗದಿಂದ ಕೊಳಗಲ್ ಮಾರ್ಗಕ್ಕೆ ರೈಲ್ವೆ ಟ್ರ್ಯಾಕ್

ಹಾಕುವುದಕ್ಕೆ ಡ್ರೋನ್ ಸರ್ವೆ ಕಾರ್ಯ ಮಾಡಿ ಮಾರ್ಕ್ ಮಾಡಿರುತ್ತಾರೆ. ಈ ಟ್ರ್ಯಾಕ್ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಕೇವಲ ಒಂದು ಮತ್ತು ಎರಡು ಎಕರೆ ಹಾಗೂ ತುಂಡು ನೀರಾವರಿ ಭೂಮಿಗಳನ್ನು ಹೊಂದಿರುವ ಅದರಲ್ಲೂ ಎಸ್.ಸಿ, ಎಸ್.ಟಿ ರೈತರು ಹೆಚ್ಚಿನ ಸಂಖ್ಯೆಯಲ್ಲಿರುವವರು ಅಲ್ಪ ಜಮೀನುಗಳನ್ನು

ಜೀವನೋಪಾಯಕ್ಕಾಗಿ ಹೊಂದಿರುತ್ತಾರೆ. ಈ ಜಮೀನುಗಳಲ್ಲಿ ರೇಲ್ವೆ ಟ್ರ್ಯಾಕ್ ಬಂದಲ್ಲಿ ಈ ರೈತ ಕುಟುಂಬಗಳೆಲ್ಲಾ ಬೀದಿಗೆ ಬೀಳುವ ಸಂಭವವಿದೆ .ಅಲ್ಲದೇ ಈ ಪ್ರದೇಶದಲ್ಲಿ ಅನೇಕ ವಾಣಿಜ್ಯ ಮತ್ತು ವಸತಿ ಲೇಔಟ್ ಗಳು ಇದ್ದು ಇವುಗಳ ಅಭಿವೃದ್ಧಿಯೂ ಸಹ ಕುಂಠಿತವಾಗುತ್ತದೆ.

ಆದ್ದರಿಂದ ತಾವುಗಳು ರೈತರ ಸಂಕಷ್ಟಗಳತ್ತ ಗಮನಹರಿಸಿ ಬಳ್ಳಾರಿ ಗ್ರಾಮಾಂತರ ಪ್ರದೇಶದ ನೀರಾವರಿ ಜಮೀನುಗಳನ್ನು ಹೊರತುಪಡಿಸಿ ನೀರಾವರಿ ಪ್ರದೇಶವಲ್ಲದ ಹಗರಿಯಿಂದ ಓಬುಳಾಪುರ ರೇಲ್ವೆ ಟ್ರ್ಯಾಕ್ ಗೆ ಹೊಂದಾಣಿಕೆಯಾಗುವಂತೆ ಹೊಸ ರೇಲ್ವೆ ಟ್ರ್ಯಾಕ್ ಮಾರ್ಗವನ್ನು ಬದಲಾವಣೆ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಗಳಲ್ಲಿ ಮನೆ ಪತ್ರವನ್ನು ನೀಡಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ, ಜಯ ಪ್ರಕಾಶ್ ರೆಡ್ಡಿ, ಓಂಕಾರಪ್ಪ,ಕರಿಯಪ್ಪ,ಚಂದ್ರಪ್ಪ,ವಿರುಪಾಕ್ಷಿ, ಸುರೇಶ್ ಹಳ್ಳಿಬಸಪ್ಪ,ಚಂದ್ರಪ್ಪ,ನಾಗರಾಜ, ಮಲ್ಲನಗೌಡ, ಯಂಕಾರೆಡ್ಡಿ, ಸದಾಶಿವ, ಸಣ್ಣ ಪಂಪಣ್ಣ, ಫಕ್ಕಿರೇಶ್, ಅಹಮದ್ ಖಾನ್ ಮತ್ತು ಬಸವನಗೌಡ ಸೇರಿದಂತೆ ಮೇಲ್ಕಂಡ ಗ್ರಾಮಗಳ ನೂರಾರು ರೈತರಿದ್ದರು.

# ಸಾಧನಾ ಸಮಾವೇಶಕ್ಕೆ ಬಳ್ಳಾರಿಯಿಂದ 10 ಸಾವಿರ ಜನ– ಶಾಸಕ ಭರತ್ ರೆಡ್ಡಿ



**ಬಳ್ಳಾರಿ :** ಮೇ 20ರಂದು ಹೊಸಪೇಟೆಯಲ್ಲಿ ನಡೆಯಲಿರುವ ರಾಜ್ಯ ಸರ್ಕಾರದ ಸಾಧನಾ ಸಮಾವೇಶಕ್ಕೆ ಬಳ್ಳಾರಿ ನಗರದಿಂದ 10 ಸಾವಿರ ಜನ ಭಾಗಿಯಾಗುವ ನಿರೀಕ್ಷೆ ಇದೆ ಎಂದು ನಗರ ಶಾಸಕ ನಾರಾ ಭರತ್ ರೆಡ್ಡಿ ಹೇಳಿದ್ದಾರೆ.

ಬಳ್ಳಾರಿಯ ಗಾಂಧಿನಗರದಲ್ಲಿರುವ ಅವರ ಕಚೇರಿಯಲ್ಲಿ ಶನಿವಾರ ಬೆಳಿಗ್ಗೆ ಮಹಾನಗರ ಪಾಲಿಕೆಯ ಸದಸ್ಯರು, ಪರಾಜಿತ ಅಭ್ಯರ್ಥಿಗಳು, ಯುವ ಮತ್ತು ಮಹಿಳಾ ಕಾಂಗ್ರೆಸ್ ಮುಖಂಡರ ಜೊತೆಗೆ ಸಮಾವೇಶ ಯಶಸ್ವಿಗೊಳಿಸುವ ಕುರಿತು ಸಭೆ ನಡೆಸಿ, ಚರ್ಚಿಸಿದ ಅವರು, ಸರ್ಕಾರದ ಎರಡು ವರ್ಷಗಳ ಸಾಧನಾ ಸಮಾವೇಶದಲ್ಲಿ 10 ಸಾವಿರ ಜನರು ಭಾಗವಹಿಸಲಿದ್ದಾರೆ. ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ನಡೆದುಕೊಂಡು ಐದು ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದಿದೆ, ಸಾವಿರಾರು ಕೋಟಿ ರೂ.ಗಳ ಹಲವಾರು ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ, ಹೀಗಾಗಿ ರಾಜ್ಯ ಸರ್ಕಾರದ ಎರಡು ವರ್ಷಗಳ ಸಾಧನೆಯನ್ನು ಜನರ ಮನೆ, ಮನಗಳಿಗೆ ತಲುಪಿಸುವ ಕೆಲಸವನ್ನು ನಾವೆಲ್ಲರೂ ಸೇರಿ ಮಾಡೋಣ ಎಂದರು.

ಸಭೆಯಲ್ಲಿ ಪಾಲಿಕೆಯ ಸದಸ್ಯರಾದ ಪಿ.ಗಾದೆಪ್ಪ, ಪ್ರಭಂಜನಕುಮಾರ್, ರಾಜಶೇಖರ, ವಿ.ಕುಬೇರ, ನೂರ್ ಮೊಹಮ್ಮದ್, ಜಬ್ಬಾರ್, ಮಿಂಚು ಸೀನಾ, ರಾಮಾಂಜನೇಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಹುಸೇನ್ ಪೀರಾಂ, ಕೆಎಂ ಅಭಿಲಾಶ್, ಕಾಂಗ್ರೆಸ್ ಮುಖಂಡರಾದ ಭಂಭಂ ದಾದಾ, ಕಣೇಕಲ್ ಮೆಹಬೂಬಸಾಬ, ಡಿ.ಸೂರಿ, ಮಂಜುಳಾ, ಯಶೋದಾ, ಎಂ.ಸುಬ್ಬರಾಯುಡು, ಬಿಆರೆಲ್ ಸೀನಾ, ಶಿವರಾಜ, ಹೊನ್ನಪ್ಪ, ಹಗರಿ ಗೋವಿಂದ, ಪಿ.ರವಿ, ರಘುರಾಂ, ಶ್ರೀಕಾಂತ್, ಖಾದರ್, ಫರಾಜ್, ಎಂ.ಡಿ.ತೌಸಿಫ್, ನೂರ್, ತಬರೇಜ್, ಸಿಲಾರ್, ಅನ್ಸರ್, ಕವಿತಾ, ಚಂಪಾ ಚವ್ಹಾಣ್, ವಿಜಯಲಕ್ಷ್ಮೀ, ಗೌಸಿಯಾಬಿ, ಕಾಂಗ್ರೆಸ್ ವಕ್ತಾರ ವೆಂಕಟೇಶ ಹೆಗಡೆ, ಭರತ್, ಥಿಯೇಟರ್ ಶಿವು, ಅಬ್ದುಲ್ ಬಾರಿ, ವೆಂಕಟ ನಾಯ್ಡು, ರಾಕಿ, ಚಾನಾಳ್ ಶೇಖರ್, ಮಡಿವಾಳಪ್ಪ, ಹಂದ್ರಾಳು ಸಂತೋಷಕುಮಾರ್, ಹಗರಿ ಕುಬೇರ ಸೇರಿದಂತೆ ಹಲವರು ಇದ್ದರು.

ವರದಿ ಎಂಇ ಜೋಶಿ

## ದಿವಂಗತ ಮುತ್ತು ಕಲಾಲ ಇವರ ಸ್ಮರಣಾರ್ಥವಾಗಿ ಅವರ ಕಿರಿಯ ಸಹೋದರ ಮಂಜುನಾಥ ಕಲಾಲ ಸುಮಾರು 25 ಸಸಿಗಳನ್ನು ನೆಡುವ ಕಾರ್ಯಕ್ರಮದ ಉದ್ಘಾಟನೆ

# ಮಂಗಳೂರಲ್ಲಿ ದಿ ಮುತ್ತು ಕಲಾಲ್ ಇವರ ಸ್ಮರಣಾರ್ಥ 25 ಸಸಿ ನೆಡುವ ಕಾರ್ಯಕ್ರಮ



**ಕೊಪ್ಪಳ :** ಕೊಪ್ಪಳ ಜಿಲ್ಲೆಯ ಕುಕನೂರ ತಾಲೂಕಿನ ಮಂಗಳೂರು ಗ್ರಾಮದ ಶ್ರೀ ಮುದುಕೇಶ್ವರ ದೇವಸ್ಥಾನದ ಹತ್ತಿರ ಇಂದು ದಿವಂಗತ ಮುತ್ತು ಕಲಾಲ ಇವರ ಸ್ಮರಣಾರ್ಥವಾಗಿಅವರಕಿರಿಯಸಹೋದರಮಂಜುನಾಥ ಕಲಾಲಸುಮಾರು25ಸಸಿಗಳನ್ನುನೆಡುವಕಾರ್ಯಕ್ರಮದ ಉದ್ಘಾಟನೆಯನ್ನು ಈರಪ್ಪ ಕುಡಗುಂಟಿ ಮಾಜಿ ಜಿಲ್ಲಾ ಪಂಚಾಯತಿ ಸದಸ್ಯರು ಮಾತನಾಡಿ ಮಂಗಳೂರು ಗ್ರಾಮದ ಕಲಾಲ್ ಕುಟುಂಬದ ದಿವಂಗತ ಮುತ್ತಣ್ಣ ಇವರ ಸ್ಮರಣಾರ್ಥವಾಗಿ ಅವರ ಸಹೋದರ ಮಂಜುನಾಥ ಕಲಾಲ್ ರವರು ಅವರ ಅಣ್ಣನ ಸವಿ ನೆನಪಿಗಾಗಿ ಇಂದಿನ ದಿವಸ ಗ್ರಾಮದ ಮುದುಕೇಶ್ವರ ದೇವಸ್ಥಾನದ ಹತ್ತಿರ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿರುವುದು ಅತ್ಯಂತ ಸಂತೋಷದ ವಿಷಯ ಸುಮಾರು 50 ಗಿಡಗಳನ್ನು ಬೆಳೆದರೆ 2,000 ಜನರಿಗೆ ಆಮ್ಲಜನಕ ಉಚಿತವಾಗಿ ದೊರೆಯುತ್ತದೆ ಎಂದರು ಈ ಗ್ರಾಮದ ಯುವಕರು ಸದಾ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ಮುಂಚೂಣಿ ಇರತಕ್ಕಂತ ಗ್ರಾಮವಾಗಿದೆ ಎಂದು ಹೇಳಿದರು ಯುವಕರು ಆಟದ ಜೊತೆಗೆ ಪರಿಸರ ಸಂರಕ್ಷಣೆ ಕಾಳಜಿ ಮಾಡುವುದು ಸಹಿತ ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು ಯುವಕರು ಕ್ರೀಡೆ ಆಡುವುದರ ಜೊತೆಗೆ ನಿಮ್ಮ ಹೊಲದಲ್ಲಿ ಜಾನುವಾರುಗಳನ್ನು ರಕ್ಷಣೆ ಮಾಡುವುದು ಸಹಿತ ನಿಮ್ಮ ಆದ್ಯ ಕರ್ತವ್ಯವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಿದರು.

ಕಳಕಪ್ಪ ಕಂಬಳಿ ಮಾಜಿ ತಾಲೂಕು ಪಂಚಾಯತಿ ಉಪಾಧ್ಯಕ್ಷರು ಮಾತನಾಡಿ ಮನುಷ್ಯನಿಗೆ ಹಣ ಎಷ್ಟು ಮುಖ್ಯವೋ ಆರೋಗ್ಯವು ಅಷ್ಟೇ ಮುಖ್ಯ ಆದರೆ ಇತ್ತೀಚಿನ ದಿನಗಳಲ್ಲಿ ಕೆಲವರಿಗೆ ಹಣ ಮಾಡುವುದೇ ಜೀವನ ಎಂದು ಕೊಂಡು ಬಿಟ್ಟಿರುತ್ತಾರೆ ಆದರೆ ನಮಗೆ ಉತ್ತಮವಾದ ಆರೋಗ್ಯವೂ ಕೂಡ ಬೇಕು ಅದಕ್ಕಾಗಿ ಪ್ರತಿಯೊಬ್ಬರು ಮನೆಗೊಂದು ಸಸಿ ನೆಡುವ ಮುಖಾಂತರ ಪರಿಸರ ಜಾಗೃತಿ ಮೂಡಿಸಬೇಕೆಂದು ಈ ಸಂದರ್ಭದಲ್ಲಿ ತಿಳಿಸಿದರು ಇತ್ತೀಚಿನ ದಿನಗಳಲ್ಲಿ ಅನೇಕ ಯುವಕರು ಮಧ್ಯ ವ್ಯಸನದ ಚಟಕ್ಕೆ ಬಲಿಯಾಗುತ್ತಿರುವುದು ದುರಾದೃಷ್ಟಕರ ಎಂದು ಹೇಳಿದರು ಇವತ್ತಿನ ಈ ಕಾರ್ಯಕ್ರಮ ಮುಂದಿನ ಯುವ ಪೀಳಿಗೆಗೆ ಪ್ರೇರಣೆಯೆಂದು ಈ ಸಂದರ್ಭದಲ್ಲಿ ಹೇಳಿದರು.

ವಿಶ್ವನಾಥ ಮರಿಬಸಪ್ಪನವರ ಮಾಜಿ ತಾಲೂಕು ಪಂಚಾಯತಿ ಉಪಾಧ್ಯಕ್ಷರು ಯಲಬುರ್ಗಾ ಮಾತನಾಡಿ ಇವತ್ತಿನ ಕಾರ್ಯಕ್ರಮದಲ್ಲಿ ನಾವೆಲ್ಲರೂ ಒಂದು ಸಂಕಲ್ಪ ಮಾಡಬೇಕು ಮನೆಗೊಂದು ಮರ ಊರಿಗೊಂದು ವನ ಕ್ಲೀನ್ ಸಿಟಿ, ಗ್ರೀನ್ ಸಿಟಿ, ಗ್ರೀನ್ ಗಾರ್ಡನ್, ಎಂಬ ಸಂಕಲ್ಪದೊಂದಿಗೆ ನಾವೆಲ್ಲರೂ ನಮ್ಮ ಗ್ರಾಮದ ಸ್ವಚ್ಛತೆಗೆ ಹಾಗೂ ನಮ್ಮ ಆರೋಗ್ಯದ ಹಿತ ದೃಷ್ಟಿಯಿಂದ ಪ್ರತಿಯೊಬ್ಬರುನಿಮ್ಮಮನೆಯಮುಂದೆಒಂದುಸಸಿನೆಡುವ ಮುಖಾಂತರ ಪರಿಸರದ ಜಾಗೃತಿ ಮೂಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳಿದರು.

ಈ ಕಲಾಲ್ ಕುಟುಂಬದವರ ಈ ಅವಿಸ್ಮರಣೀಯ ಕಾರ್ಯಕ್ರಮ ಮುಂದಿನ ಪೀಳಿಗೆಗೆ ಮಾದರಿ ಎಂದು ಹೇಳಿದರು ನಾವೆಲ್ಲರೂ ಮದುವೆ ಕಾರ್ಯಕ್ರಮಕ್ಕೆ ಹೋದಾಗ ಇತ್ತೀಚಿನ ದಿನಗಳಲ್ಲಿ ದುಬಾರಿ ಬೆಲೆಯ ವಸ್ತುಗಳನ್ನು ಕೊಡುತ್ತಿದ್ದೇವೆ ಆದರೆ ಇವತ್ತಿನಿಂದ ಮದುವೆಗೆ ಹೋದಾಗ ವಧು ವರರ ಕೈಯಲ್ಲಿ ಒಂದು ಸಸಿ ಕೊಡುವ ಮುಖಾಂತರ ಪರಿಸರದ ಜಾಗೃತಿ ಮೂಡಿಸಬೇಕೆಂದು ಕರೆ ನೀಡಿದರು ಕಾಡನ್ನು ಬೆಳೆಸಿ, ನಾಡನ್ನು ಉಳಿಸಿ ಎಂದು ಈ ಸಂದರ್ಭದಲ್ಲಿ ಹೇಳಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷರು ಸಕ್ರಪ್ಪ ಮಂಗಳಪ್ಪ ಚಿನ್ನೂರು, ಸುರೇಶ ಮಡಿವಾಳರ ಏನ್‌ಜಿಓ ಉಪಾಧ್ಯಕ್ಷರು ಕುಕನೂರ ತಾಲೂಕು, ಮಂಜುನಾಥ ತಳವಾರ, ಗುರುರಾಜ ಇಲಕಲ್ಲ,ಮುತ್ತು ತಳವಾರ,ಪ್ರಕಾಶ ಚಿನ್ನೂರ, ಅನಿಲ ಕಲ್ಲಭಾವಿ,ಮಾರುತಿ ಅಳವಂಡಿ, ಶ್ರೀಧರ ತುರಾಯದ, ಮಂಜುನಾಥ ಕಲಾಲ, ಇರ್ಫಾನ್ ಮಜಾವರ, ಸುರೇಶ ಮ್ಯಾಗಳೇಶಿ, ಶಿವು ಕದ್ರಳ್ಳಿ, ಶರಣು ಬಂಡಿಹಾಳ, ಶಿವುಪುತ್ರಪ್ಪ ಪೂಜಾರ, ತಿಪ್ಪಣ್ಣ ಕಲ್ಲೂರು, ಸಂತೋಷ ಉಪ್ಪಾರ, ಕಿರಣ ಅಳವಂಡಿ,ಕಳಕೇಶ ಬಂಡ್ರಕಲ್,ಮಂಜುನಾಥ ಪಾಟೀಲ,ಮಂಜುನಾಥ ಮುದ್ಲಾಪೂರ, ಅಂಬರೀಶ, ಇತರರು ಇದ್ದರು.

ಮಂಗಳೇಶ ಯಲಿಗಾರ ಶಿಕ್ಷಕರು ಪ್ರಾಸ್ತಾವಿಕ ಮಾತುಗಳನ್ನಾಡಿದರು. ಸ್ವಾಗತ ರವೀಂದ್ರನಾಥ ಕೊಟ್ರಪ್ಪ ತೋಟದ, ಪ್ರಾರ್ಥನೆ ಮಾರುತಿ ಹಾದಿಮನಿ ಶಿಕ್ಷಕರು ಕಾರ್ಯಕ್ರಮದ ನಿರ್ವಹಣೆ ಶರಣಪ್ಪ ಕುಂಬಾರ ಶಿಕ್ಷಕರು, ಮಾರುತಿ ಬನ್ನಿಗೋಳ ಶಿಕ್ಷಕರು ಆಭಾರ ಮನ್ನಿಸಿದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618